# 51

# ಎಂದೂ ಪ್ರಸಂಗಿಸದಂತಹ ಒಂದು ಮಹತ್ವದ ಪ್ರಸಂಗ

# (17:22-34)

"ನಾನು ಎಲ್ಲಿಂದ ಬಂದಿರುವೆನು?"; "ನಾನು ಏಕೆ ಇಲ್ಲಿರುವೆನು?"; "ನಾನು ಎಲ್ಲಿಗೆ ಹೋಗುತ್ತಿರುವೆನು?" ಎಂಬ ಅತ್ಯಂತ ಪ್ರಮುಖವಾದ ಪ್ರಶ್ನೆಗಳನ್ನು ನಾವು ಕೇಳಬೇಕಾಗುತ್ತದೆ: "ವಿಜ್ಞಾನವು ಮೊದಲ ಪ್ರಶ್ನೆಗೆ ಉತ್ತರವನ್ನು ನೀಡುವುದಾದರೆ, ಎರಡನೆಯ ಪ್ರಶ್ನೆಯ ಉತ್ತರಕ್ಕಾಗಿ ತತ್ವಜ್ಞಾನವು ಹೋರಾಡುತ್ತದೆ; ಆದರೆ ಈ ಮೂರು ಪ್ರಶ್ನೆಗಳಿಗೆ ಕ್ರೈಸ್ತ ನಂಬಿಕೆಯಲ್ಲಿ ತೃಪ್ತಿಕರವಾದ ಉತ್ತರವನ್ನು ನೀಡುತ್ತದೆ."[1]

ಮನುಷ್ಯನ ಗೊಂದಲ ಮಯವಾದ ಪ್ರಶ್ನೆಗಳಿಗೆ, ಪರಲೋಕದ ಸರಳವಾದ ಉತ್ತರವನ್ನು ಅಪೊಸ್ತಲರ ಕೃತ್ಯದ 17ರಲ್ಲಿ ದಾಖಲು ಮಾಡಲಾಗಿದೆ, ಅದು ಪೌಲನು ಮಾಡಿದ ಪ್ರಸಂಗದಲ್ಲಿ ಅಡಕವಾಗಿದೆ. ಈ ಪ್ರಸಂಗದಲ್ಲಿ ಕೇವಲ ಹತ್ತು ವಚನಗಳು ಅಡಕವಾಗಿದ್ದು, ಎರಡು ನಿಮಿಷದಲ್ಲಿ ಓದಿ ಮುಗಿಸಿದರೂ; ಒಬ್ಬ ಸಾಮಾನ್ಯ ಮನುಷ್ಯನು ಪ್ರಸಂಗಿಸಿದ ಮಹಾ ಪ್ರಸಂಗವಾಗಿದೆ.[2]

ಈ ಪ್ರಸಂಗದ ಸನ್ನಿವೇಶವನ್ನು ಈಗಾಗಲೇ ನಾವು ತಿಳಿದಿದ್ದು, ಉತ್ತಮ ನಿದರ್ಶನವಾಗಿರುವ ಈ ಪ್ರಸಂಗವನ್ನು ಕೂಲಂಕುಷವಾಗಿ ಪರಿಶೀಲನೆ ಮಾಡೋಣ.

## ಪ್ರಸಂಗ (17:22-31)

ಅರಿಯೊಪಾಗದಲ್ಲಿ (ಮಾರ್ಸ್ ಬೆಟ್ಟ) ಎರಡು ಬಿಳಿಯ ಕಲ್ಲುಗಳಿದ್ದವು. ನ್ಯಾಯ ವಿಚಾರಣೆಯ ಸಮಯದಲ್ಲಿ ಅಪರಾಧಿಯು ಒಂದು ಕಲ್ಲಿನ ಮೇಲೆ, ಹಾಗೂ ಅವನ ಮೇಲೆ ದೂರು ಹೇಳುವವರು ಅವನ ಎದುರಿಗಿರುವ ಇನ್ನೊಂದು ಕಲ್ಲಿನ ಮೇಲೆ ನಿಲ್ಲುವರು. ಶಬ್ದವು ಮೇಲ್ಮುಕವಾಗಿ ಹೋಗುವದರಿಂದ, ಇವರು ಬೆಟ್ಟದ ತಳಭಾಗದ ಕಡೆಗೆ ನಿಂತಿದ್ದರು ಜ್ಞಾನಿಗಳಾದ ಅಥೇನದವರ ಸಂಗಡ ಮಾತನಾಡಲು ಪೌಲನು ಸಿದ್ಧನಾಗಿರುವದನ್ನು ನಾನು ಊಹಿಸುತ್ತೇನೆ.

ಅವನು ಯಾವ ರೀತಿ ಆರಂಭಿಸಬೇಕು ಪಿಸದ್ಯ ಅಂತಿಯೋಕ್ಯದ ಸಭಾಮಂದಿರದಲ್ಲಿ ಮಾಡಿದಂತೆ ಆರಂಭ ಮಾಡಲು ಸಾಧ್ಯವಿರಲಿಲ್ಲ. ಅಲ್ಲಿ ಅವನು ಇಸ್ರಾಯೇಲ್ಯರ ಇತಿಹಾಸವನ್ನು ಹೇಳಿದನು (13:17). ಮತ್ತು ಶಾಸ್ತ್ರಾಧಾರಗಳಿಂದ ಅವರೊಂದಿಗೆ ವಾದಿಸಲು ಸಾಧ್ಯವಾಗಲಿಲ್ಲ, ಇದನ್ನು ಅವನು ಥೆಸಲೋನಿಕದ ಸಭಾಮಂದಿರದಲ್ಲಿ ಮಾಡಿದ್ದನಷ್ಟೆ (17:2), ಯಾಕಂದರೆ ಇಲ್ಲಿ ಅವನ ಕೇಳುಗರು ದೇವ ವಾಕ್ಯವನ್ನು ಅರಿತವರಾಗಿರಲಿಲ್ಲ, *ಜನರು ಇರುವಂಥ ಸ್ಥಳದಿಂದಲೇ ನಾವು ಯಾವಾಗಲೂ ಆರಂಭಿಸಬೇಕು.* ಯೇಸು ಒಬ್ಬ ಸ್ತ್ರೀಯನ್ನು ಬಾವಿಯ ಬಳಿ ಕಂಡಾಗ - ಜೀವಕರವಾದ ನೀರಿನ ಬಗ್ಗೆ ಅವಳೊಂದಿಗೆ ಮಾತನಾಡಿದನು (ಯೋಹಾನ 4:10). ಸತ್ಯವನ್ನು ಹುಡುಕುತ್ತಿದ್ದವರ ಬಳಿಯಲ್ಲಿ ಪೌಲನು - ಸತ್ಯದ ಕುರಿತಾಗಿ ಮಾತನಾಡಿದನು ಅದು - ದೇವರ ಮತ್ತು ಮಾನವರ ಕುರಿತ ಸತ್ಯವಾಗಿತ್ತು.

ಪೌಲನು ಅರಿಯೊಪಾಗದ ಮಧ್ಯದಲ್ಲಿ ನಿಂತುಕೊಂಡು ಹೇಳಿದ್ದೇನೆಂದರೆ "ಅಥೇನೆಯ ಜನರೇ, ನೀವು ಎಲ್ಲಾದರಲ್ಲೂ ಅತಿ ಭಕ್ತಿವಂತರೆಂದು ನನಗೆ ತೋರುತ್ತದೆ" (ವಚನ

22). “ಭಕ್ತಿವಂತರೆಂಬ” ಗ್ರಿಕ್ ಪದದಲ್ಲಿ “ದೆವ್ವಗಳಿಗೆ ಭಯಪಡುವವರೆಂಬ” ಜೋಡಿ ಪದಗಳಿವೆ (ದೆವ್ವವನ್ನು ಗೌರವಿಸುವರು). “ದೆವ್ವ” ಎಂಬ ಪದವು ನಮಗೆ ಅಸಹ್ಯ ವಾದದ್ದಾದರೂ, ಗ್ರೀಕರಿಗೆ ಅದು ಸಾಮಾನ್ಯವಾದ ಪೌಲನ ಮಾತಾಯಿತು, ಯಾಕೆಂದರೆ ಗ್ರೀಕರು ದೆವ್ವವನ್ನು ಪೂಜಿಸುತ್ತಿದ್ದರು, ಅವರು ಆ ಪದವನ್ನು “ಉತ್ತೇಜನ”[3] ಅಥವಾ ಟೀಕೆಯ[4] ಪದ ಎಂದು ಪರಿಗಣಿಸಲಿಲ್ಲ, ಅದು ಸಾಧಾರಣವಾದ ವಾಕ್ಯವಾಗಿತ್ತು.

ಪೌಲನು ತನ್ನ ಹೇಳಿಕೆಯನ್ನು ವರ್ಣಿಸಿದನು: “ನಾನು ನಿಮ್ಮ ಪಟ್ಟಣದಲ್ಲಿ ತಿರುಗಾಡುತ್ತಾ ನೀವು ಪೂಜಿಸುವ ದೇವತಾ ಪ್ರತಿಮೆಗಳನ್ನು ಚೆನ್ನಾಗಿ ನೋಡುತ್ತಾ ಇದ್ದಾಗ ಒಂದು ಬಲಿ ಪೀಠವು ನನ್ನ ಕಣ್ಣಿಗೆ ಬಿತ್ತು, ಅದರ ಮೇಲೆ ‘ತಿಳಿಯದ ದೇವರಿಗೆ’ ” ಎಂದು ಬರೆದಿತ್ತು (ವಚನ 23ಎ). ಲೌಕಿಕ ಇತಿಹಾಸಕಾರರು, ಈ ವಿಧವಾದ ಬಲಿಪೀಠಗಳು ಅಲ್ಲಿ ಸಾಮಾನ್ಯವಾಗಿದ್ದವು ಎಂದು ದಾಖಲು ಮಾಡಿರುವರು,[5] ನಾನು ಪೆರ್ಗಮವನ್ನು ಸಂಧಿಸಿದಾಗ (ಅಥೇನದ ಏಗಿಯನ್ ಸಮುದ್ರದ ಬಳಿ), ದೇಮತ್ರನ ಆಲಯವನ್ನು ನೋಡಿದೆನು, ಅಲ್ಲಿ ಪುರಾತನ ವಾಸ್ತು ತಜ್ಞರು ಒಂದು “ತಿಳಿಯದ ದೇವರಿಗೆ” ಎಂಬ ಬಲಿಪೀಠವನ್ನು ಕಂಡು ಹಿಡಿದಿದ್ದರು.

ಈ ದೇವಾಲಯಗಳ ಮೂಲದ ಕುರಿತು ಸಾಕಷ್ಟು ಸಂಶಯಗಳಿವೆ. ಕೆಲವು ಸಾರಿ ಆ ಮಂದಿರಗಳು ನಾಶವಾದಾಗ, ಅದನ್ನು ಪುನಃ ನಿರ್ಮಿಸಿದ್ದರು, ಅದರಲ್ಲಿದ ಮೂಲ ಬರವಣಿಗೆಯ ಅಳಿಸಿಹೋಗಿದ್ದರೆ ಅದಕ್ಕೆ “ತಿಳಿಯದ ದೇವರಿಗೆ” ಎಂಬ ಬರವಣಿಗೆಯನ್ನು ನೀಡುತ್ತಿದ್ದರು.

ಹಲವಾರು ವರ್ಷಗಳ ಹಿಂದೆ, ಪ್ರಖ್ಯಾತವಾದ ಒಂದು ವಿವರಣೆಯನ್ನು ನೀಡಲಾಗಿದೆ. ಆ ಸ್ಥಳದಲ್ಲಿ ಒಂದು ಪಿಡುಗು ರೋಗವು ಹಬ್ಬಲ್ಪಟ್ಟಿತ್ತು, ಅದರ ನಿಮಿತ್ತ ಸಾವಿರಾರು ಜನರು ಅಸುನೀಗಿದ್ದರು. ದೇವತೆಗಳಿಗೆ ಅಸಂತೋಷ ಉಂಟಾಗಿದ್ದರಿಂದ, ಜನರು ತಮ್ಮ ಸಾವಿರಾರು ದೇವತೆಗಳಿಗೆ ಯಜ್ಞವನ್ನು ಸಮರ್ಪಿಸಿದ್ದರು, ಅದರಿಂದ ಪ್ರಯೋಜನವಾಗದೆ ಇರುವಾಗ, ಎಫಿಮೆನಿಡಸ್ ಎಂಬ ಒಬ್ಬ ವೃದ್ಧನು, ಅವರಿಗೆ ತಿಳುವಳಿಕೆಯನ್ನು ನೀಡಿ, “ನಿಮ್ಮ ವಿಷಯದಲ್ಲಿ ಸಂತೋಷಪಡದ ಇನ್ನೊಂದು ದೇವತೆ ಇರಬಹುದು” ಆದ್ದರಿಂದ ಅದಕ್ಕೆ ತಕ್ಕ ಶಾಸ್ತಿಯನ್ನು ನೀವು ಮಾಡಬೇಕು ಎಂಬ ಆಲೋಚೆಯನ್ನು ನೀಡಿದ್ದನು: ಅದಕ್ಕಾಗಿ ಬಣ್ಣ ಬಣ್ಣದ ಕುರಿ ಮಂದೆಯನ್ನು ಅರಿಯೊಪಾಗದ ಸ್ಥಳದಲ್ಲಿ ಬಿಟ್ಟುಬಿಡಬೇಕು, ಆ ಅರಿಯದ ದೇವರು ತನ್ನ ಮೆಚ್ಚಿಗೆ ಗನುಗುಣವಾದ ಕುರಿಯನ್ನು ಬಲಿ ತೆಗೆದುಕೊಳ್ಳುವನು ಎಂಬ ಸಲಹೆಯನ್ನು ನೀಡಿದ್ದನು. ಕುರಿಗಳು ಯಾವ ಯಾವ ಸ್ಥಳದಲ್ಲಿ ಬಲಿಪಶುವಾಗಿ ಬಿದಿದ್ದವೋ, ಆ ಎಲ್ಲಾ ಸ್ಥಳಗಳಲ್ಲಿ ಜನರು ಒಂದೊಂದು ಬಲಪೀಠವನ್ನು[6] ನಿರ್ಮಿಸಿದರು, ಮತ್ತು ಆ ಕುರಿಗಳನ್ನು ಅದರ ಮೇಲೆ ಯಜ್ಞಮಾಡಿದರು. ಅಂತಹ ಒಂದು ಮೀಸಲಾದ ಬಲಪೀಠವು, ಪೌಲನ ದಿವಸಗಳ ವರೆಗೂ ಹಾಳಾಗದೆ ಉಳಿದಿತ್ತು.

ಯಾವುದೇ ದೇವತೆಗಳನ್ನು ಸನ್ಮಾನ ಮಾಡದೆ ಇರಬಹುದು ಎಂಬ ಭಯದ ಕಾರಣದಿಂದ, ಇದನ್ನು ಅವರು ಮಾಡಿದರು ಎಂಬ ಸರಳ ವಿವರವನ್ನು ನೀಡಲಾಗಿದೆ, ಆದ್ದರಿಂದ ಅವರುಗಳು ಅರಿಯದ ದೇವರಿಗೆ ಬಲಿಪೀಠಗಳನ್ನು ನಿರ್ಮಿಸಿದ್ದರು. ಅವುಗಳ ನಿರ್ಮಾಣದ ಕಾರಣ ಏನೇ ಇರಬಹುದು, ಅದು ಪೌಲನ ಉದ್ದೇಶಕ್ಕೆ ಪರಿಪೂರ್ಣವಾಗಿತ್ತು. “ಪರದೇಶದ ದೇವತೆಗಳನ್ನು” ಪೌಲನು ಪರಿಚಯಿಸಿದ್ದನು ಎಂಬ ಆರೋಪವು ಅವನ ಮೇಲೆ ಇತ್ತು (ವಚನ 18); ಆದ್ದರಿಂದ ನೀವು ಯಾವುದನ್ನು ತಿಳಿಯದೆ ಪೂಜಿಸುತ್ತೀರೋ “ಅದನ್ನೇ ನಿಮಗೆ ತಿಳಿಯಪಡಿಸುತ್ತೇನೆ” (ವಚನ 23ಬಿ).

ವಚನ 23ರಲ್ಲಿರುವ “ತಿಳಿಯದ” ಎಂಬುದು ಅವಮಾನದ ಪರವಾಗಿದೆ. “ತಿಳಿಯದ” ಎಂಬದಕ್ಕಿಂತಲೂ, “ಕೊಳಕು” ಎಂದು ಜನರು ಕರೆಸಿಕೊಳ್ಳಬಹುದು. ಆದರೆ ಯಾರನ್ನು “ತಿಳಿಯದ ದೇವರು”[7] ಎಂದು ಅವರು ಕರೆದಿದ್ದರೋ, ಅದನ್ನೇ ಪೌಲನು ಪದ ಪ್ರಯೋಗ

ಮಾಡಿದ್ದನು. ಗ್ರೀಕ್ "ತಿಳಿಯದ ದೇವರು" ಎಂಬದನ್ನು *ಅಗ್ನೋಸ್ಟ್* ಎನ್ನುವವರು[8] (ಜೋಡಿ ಪದದ ಏಕನಾಮ) *ಗ್ನೋಸೀಸ್* (ತಿಳಿವಳಿಕೆ) ಅವರಿಗೆ ತಿಳುವಳಿಕೆಯ ಕೊರತೆಯಿತ್ತು ಎಂಬ ಅರ್ಥ (ಅರಿಯರು). ಇದರ ಪರಿಣಾಮವಾಗಿ ಪೌಲನು, "ನೀವು ಯಾವ ದೇವರನ್ನು ನೀವು ಅರಿಯಲಿಲ್ಲವೋ, ಆತನನ್ನೇ ನಾನು ಪ್ರಚುರಪಡಿಸುತ್ತಿದ್ದೇನೆ."

**ದೇವರು ಮಾಡಿರುವ ಸಂಗತಿಯಾದರೂ ಏನು**

ದೇವರು ಕುರಿತು ಅರಿಯದೆ ಇದ್ದ ಜನರೊಂದಿಗೆ ಪೌಲನು ಮಾತನಾಡುವಾಗ, ಅವನು ಯೇಸುವಿನ ಕುರಿತು ಆರಂಭಿಸದೆ, ದೇವರ ಕುರಿತು ಆರಂಭಿಸಿದನು. ಅಧರ್ಮಿಗಳೆಲ್ಲರೂ ದೇವರ ಕುರಿತು ಆರಂಭಿಸಿದರು. ಅಧರ್ಮಿಗಳೆಲ್ಲರೂ ದೇವರ ಕುರಿತು ಈ ಲೋಕದಲ್ಲಿ ಅರಿಯದವರಾಗಿದ್ದಾರೆ ನಿಮ್ಮ ಇಚ್ಛೆಯ ಪ್ರಕಾರ ಉಪದೇಶಿಸದೆ ಜನರ ಅಭಿಪ್ರಾಯದಿಂದ ಪ್ರಸಂಗವನ್ನು ಆರಂಭಿಸಬೇಕು. ಇದನ್ನು ಯಾವಾಗಲು ನೆನಪಿನಲ್ಲಿಡಬೇಕು.

(1) ಎಲ್ಲವನ್ನು ದೇವರೇ ಸೃಷ್ಟಿಸಿರುವನು.

ದೇವರ ಇರುವಿಕೆಯ ಕುರಿತು ತತ್ವಜ್ಞಾನದಿಂದ ಪೌಲನು ಆರಂಭಿಸಿದ್ದಲ್ಲ. ಅನೇಕರು "ದೇವತೆಗಳೆಂಬುದನ್ನು" ನಂಬುತ್ತಾರೆ, ಅಥೇನದವರೂ ಸಹ ಅದನ್ನೇ ಮಾಡಿದರು. ಪೌಲನ ಪ್ರಸಂಗವು, ಹಳೇ ಒಡಬಡಿಕೆಯ ಆರಂಭದ (ಆದಿಕಾಂಡ 1:1) ಹಾಗೆ ಇತ್ತು. "ಜಗತ್ತನ್ನೂ ಅದರಲ್ಲಿರುವ ಎಲ್ಲಾ ವಸ್ತುಗಳನ್ನು ಉಂಟುಮಾಡಿದ ದೇವರು" ಎಂದು ಆರಂಭಿಸಿದನು (ವಚನ 24ಎ).[9]

ಪೌಲನ ಮಾತುಗಳು, ಗ್ರಾಂಡ್ ಕೆನಿಯನ್ ಹಾಗೂ ಕಾರ್ಲ್ಸ್‌ಬಾಡ್ ಕವೆರೆನ್ಸ್, ಸ್ವಿಸ್ ದೇಶದ ಆಲ್ಫ್ಸಿ, ಆಸ್ಟ್ರೇಲಿಯಾದ ಅಯರ್ಸ್ ಬಂಡೆಗಳ ಸುಂದರ ಸೃಷ್ಟಿ ಸ್ಕಾಂಟ್‌ಲ್ಯಾಂಡಿನ ಹಸಿರು, ಹವಾಯಿಯ ಸುಂದರವಾದ ಸೂರ್ಯಸ್ತಮಾನ, ಯಾವುದೇ ಖಂಡದಲ್ಲಿರುವ ರಾತ್ರಿಯ ಮಿನುಗುವ ನಕ್ಷತ್ರಗಳ ಸೃಷ್ಟಿಯನ್ನು ನೆನಪು ಮಾಡಿತು. "ಇದನ್ನೆಲ್ಲಾ ದೇವರೇ ಮಾಡಿರುವನು!" ಎಂಬುದನ್ನು ನಾನು ಅರಿಯುವಾಗ ಆಶ್ಚರ್ಯ ಚಕಿತನಾಗುತ್ತೇನೆ.

ಅವರುಗಳು ದೇವರನ್ನು ನಿರ್ಮಿಸದೆ, ದೇವರೇ ಅವರನ್ನು ನಿರ್ಮಿಸಿದವನು ಎಂದು ಪೌಲನು ಹೇಳಿದನು; ಅವರು ಆತನಿಗಾಗಿ ಮನೆಯನ್ನು ನಿರ್ಮಾಣಮಾಡದ, ದೇವರು ಅವರಿಗಾಗಿ ಭೂಮಿ ಮನೆಯನ್ನು ನಿರ್ಮಾಣ ಮಾಡಿದನು ಅಂದನು - ಆಕಸ್ಮಿಕವಾಗಿ ಈ ಭೂಮಿ ಉಂಟಾಯಿತು ಎಂಬ ಎಫಿಕೂರಿಯನ್ನರ ತತ್ವಕ್ಕೆ ವಿರೋಧ ಮಾಡಿದನು.

ಜೀವಿತದ ಸದುದ್ದೇಶವನ್ನು ಅರ್ಥಮಾಡಿಕೊಳ್ಳಬೇಕಾದರೆ, ಅದಕ್ಕೆ ತಿಳುವಳಿಕೆಯ ಅಗತ್ಯವಿದೆ, ಸೃಷ್ಟಿ ಕರ್ತನನ್ನು ತಿಳುಕೊಳ್ಳವದರಿಂದ ಅದು ಸಾಧ್ಯವಾಗುತ್ತದೆ. ಆ ವಿಶೇಷವಾದ ಸೃಷ್ಟಿಗೆ ವಿರೋಧವಾದದ್ದನ್ನೇ ಸೈತಾನನು ಮಾಡುತ್ತಾನೆ - ಆದ್ದರಿಂದ ನಾವು ಆಕಸ್ಮಿಕವಾಗಿ ಬಂದವರು ಎಂಬ ಸೈತಾನನ ತತ್ವವನ್ನು ಪೂರ್ಣವಾಗಿ ವಿರೋಧಿಸಬೇಕು!

ಸಮಸ್ತವನ್ನು ಉಂಟುಮಾಡಿದವನು ದೇವರೇ ಎಂದು ಪೌಲನು ಪ್ರಕಟಿಸಿ: "ಆ ದೇವರು ಭೂಮ್ಯಾಕಾಶಗಳ ಒಡೆಯನಾಗಿರುವದರಿಂದ ಆತನು ಕೈಯಿಂದ[10] ಕಟ್ಟಿರುವ ಗುಡಿಗಳಲ್ಲಿ ವಾಸಮಾಡುವವನಲ್ಲ; ತಾನೇ ಎಲ್ಲರಿಗೂ ಜೀವ ಶ್ವಾಸ ಮುಂತಾದದ್ದೆಲ್ಲವನೂ ಕೊಡುವವನಾಗಿರಲಾಗಿ ಕೊರತೆಯಿದ್ದವನಂತೆ ಮನುಷ್ಯರ ಕೈಗಳಿಂದ ಸೇವೆ ಹೊಂದುವವನೂ ಅಲ್ಲ" (ವಚನ 24ಬಿ, 25ಎ). ಪ್ರಪಂಚದಲ್ಲಿ ಎಲ್ಲಿಯೂ ಇರಲಾರದಂತ, ದೇವಸ್ಥಾನಗಳನ್ನು ಹೊಂದಿದ್ದ ಸ್ಥಳದಲ್ಲಿ ಪೌಲನು ಇದ್ದನು. ಅವನಿಗೆದುರಾಗಿ ದ್ಯೌಸ್ ದೇವಾಲಯವಿತ್ತು. ಕೆಳಭಾಗದಲ್ಲಿ ವಿಗ್ರಹ ಹಾಗೂ ದೇವಾಲಯಗಳಿಂದ ತುಂಬಿದ ಅಗೋರವು ಇತ್ತು. ನಾಲ್ವತ್ತು ದೇವಾಲಯಗಳನ್ನು ಹೊಂದಿದ್ದ ಅರಿಯೋಪಾಗವು ಮೇಲ್ಭಾಗದಲ್ಲಿತ್ತು, ಹಾಗೂ ಹೋಲಿಸಲಾರದ ಪಾರ್ಥೇನನ್ ಸಹ ಒಳಗೊಂಡಿತ್ತು. ದೇವಾಲಯಗಳಲ್ಲಿದ್ದ ನಿರ್ಜೀವ ವಿಗ್ರಹಗಳು, ಹೊಂದಬಹುದಾದ ಯಾವುದೇ ಸೇವೆಯನ್ನು ಈ ಜೀವವುಳ್ಳ ದೇವರು

ಬಯಸಲಿಲ್ಲ, ಆದರೆ ಆತನ ಸಹಾಯವು ಅವರಿಗೆ ಅವಶ್ಯವಾಗಿತ್ತು.

(2) ಎಲ್ಲಾ ಮನುಷ್ಯರನ್ನು ಸೃಷ್ಟಿಸಿದವನು ದೇವರೇ.

ಸಾಮಾನ್ಯವಾದ ಸಂಗತಿಯಿಂದ ನಿರ್ದಿಷ್ಟವಾದ ಸಂಗತಿಗೆ ಪೌಲನು ಮುಂದುವರಿದನು. ದೇವರು ಸಕಲವನ್ನು ಮಾಡಿರುವನು ಎಂದಾದರೆ, ನಮ್ಮನ್ನು ಆತನೇ ಉಂಟು ಮಾಡಿರುವನು: "ಆತನು ತಾನೇ ಎಲ್ಲರಿಗೂ ಜೀವಶ್ವಾಸವನ್ನು ನೀಡುವನು" (ವಚನ 25ಬಿ). ಆತನು ನಮಗೆ ಪ್ರಾಥಮಿಕವಾಗಿ ಜೀವವನ್ನು ನೀಡುತ್ತಾನೆ: ನಂತರ ಶ್ವಾಸವನ್ನು ನೀಡಿ ಮುಂದುವರಿಯುವಂತೆ ಮಾಡುತ್ತಾನೆ: ನಂತರ ನಾವು ಜೀವದಿಂದಿರುವಂತೆ ಸಮಸ್ತವನ್ನು ನೀಡುತ್ತಾನೆ. ಆ ಶ್ವಾಸವನ್ನು ನೀನು ಹೊಂದುವಂತೆ ಮಾಡುತ್ತಾನೆ - ಯಾಕೆಂದರೆ ಅದನ್ನು ನೀನು ಹೊಂದದೆ ಹೋದರೆ ಮರಣವೇ ಗತಿ. ಪ್ರತಿಯೊಂದು ಶ್ವಾಸವು ಸರ್ವಶಕ್ತನಿಂದ ಪಡೆದ ವರವಾಗಿದೆ!

ಆತನು ಒಬ್ಬನಿಂದಲೇ,[11] ಎಲ್ಲಾ ಜನಾಂಗದವರನ್ನು ಸೃಷ್ಟಿಸಿದನು (ವಚನ 26ಎ). "ಒಬ್ಬನು" ಎಂಬ ಪದಕ್ಕೆ "ಮನುಷ್ಯನು" ಎಂದು ಕೆಲವು ಅನುವಾದಗಳಲ್ಲಿ ತಿಳಿಸಲಾಗಿದೆ. ಅದು ಅದಾಮನಿಗೆ[12] ಸೂಚನೆಯಾಗಿದೆ. ದೇವರೇ ನಮ್ಮನ್ನು ನಿರ್ಮಿಸಿರುವದರಿಂದ, ಆತನು ನಮಗೆ ಒಬ್ಬನೆ ತಂದೆಯಾಗಿದ್ದು, ನಾವೆಲ್ಲರು ಸಹೋದರರಾಗಿರುವೆವು! ಇನ್ನೊಂದು ಚಿತ್ರಣವು ನನ್ನ ಮುಂದೆ ಕಾಣಿಸುತ್ತದೆ: ಅಥೇನದ ಬಾಲರು ಜೇನ್ಸ್ ಪ್ಯಾಂಟುಗಳನ್ನು ಧರಿಸಿ ಓಡಾಡುತ್ತಿರುವರು. ವೃದ್ಧನಾದವನೊಬ್ಬನು ತನ್ನ ಮುಖದ ಮೇಲೆ ಚಿತ್ರವನ್ನು ಬಿಡಿಸಿಕೊಂಡಿರುವನು, ಅಲ್ಲಿದ್ದ ಸ್ಥಳೀಯ ಅಮೇರಿಕದವನೊಬ್ಬನು ಸಾಂಪ್ರದಾಯಿಕ ನೃತ್ಯ ಮಾಡುತ್ತಿರುವನು, ನೆರೆಯವನಾದ ಆಸ್ಟ್ರೇಲಿಯದವನು ಸಹಕರಿಸುತ್ತಿರುವನು, ಬಣ್ಣದ ಅಲಂಕಾರ ಮಾಡಿಕೊಂಡಿರುವ ಜೆಪ್ಸಿ ಕುಟುಂಬವು ಅಲ್ಲಿದೆ, ಮಗುವಾದ ಅನಿ ಕ್ರಿಸ್ಟೀನ್ ವಿಲ್ಕಿನ್‌ಸನ್ ತಾಯಿಯ ತೋಳುಗಳಲ್ಲಿರುವಳು[13] ಅಲ್ಲಿರುವವರಲ್ಲಿ ಕೆಲವರು ನನ್ನ ಹಾಗೆ ಇದ್ದರು, ಕೆಲವರು ಹಾಗಿರಲಿಲ್ಲ; ಆದರೆ ಅವರೆಲ್ಲರೂ ದೇವರ ಸೃಷ್ಟಿಯಾಗಿದ್ದರು!

ಈ ಹಿಂದೆ ಗ್ರೀಕರ ದೇವರುಗಳ ಕುರಿತು ಪೌಲನು ವಿವರಿಸಿದ್ದರೆ, ಈಗ ಅವರು ಮನುಷ್ಯರ ಕುರಿತು, ಅವರು ಆಲೋಚಿಸಿದ್ದ ವಿಷಯವನ್ನು ತಿಳಿಸುತ್ತಿದ್ದನು. ಗ್ರೀಕರು ತಾವು ಪರಿಪೂರ್ಣರೆಂದು ತಿಳಿದಿದ್ದರು. ಇತರ ಮನುಷ್ಯರಿಗಿಂತ ತಾವು ವಿಭಿನ್ನವಾದ ಸ್ಥಾನವನ್ನು ಹೊಂದಿದ್ದೇವೆಂದು ತಿಳಿದಿದ್ದರು. ಮನುಷ್ಯರನ್ನು ಎರಡು ಗುಂಪುಗಳಾಗಿ ವಿಂಗಡಿಸಿದರು: "ಗ್ರೀಕರು ಮತ್ತು ಅನಾಗರೀಕರು ದೇವರು ಒಬ್ಬನಿಂದಲೇ ಎಲ್ಲಾ ಜನಾಂಗದವರನ್ನು (ಗ್ರೀಕ ರನ್ನು) ಉಂಟು ಮಾಡಿ ಅವೆರೆಲ್ಲರೂ ಭೂಮಿಯಲ್ಲಿ ಜೀವಿಸುವಂತೆ ಮಾಡಿದನು." ಎಂಬ ಅಂಶವು ಗ್ರೀಕರ ರಾಷ್ಟ್ರೀಯ ಗೌರವಕ್ಕೆ ಅಪಮಾನವೆಂದು ತಿಳಿದಿದ್ದರು.

ಗ್ರೀಕರ ಸಂಗಡ ಇತರ ಪಂಗಡದವರು ಸಹ ಜನರಲ್ಲಿ "ನಾವು" ಮತ್ತು "ಅವರು" ಎಂಬ ವಿಂಗಡನೆಯನ್ನು ಮಾಡಿರುತ್ತಾರೆ ಯೆದ್ಯರು ಇದನ್ನು "ಯೆಹೂದ್ಯರು ಮತ್ತು ಅನ್ಯರು" ಎಂದು ಕರೆದಿರುವರು. ರೋಮಾಯರು ಇದನ್ನು "ರೋಮಾಯರ ಪ್ರಜೆಗಳು ಹಾಗೂ ರೋಮಾಯರಲ್ಲದ ಪ್ರಜೆಗಳೆಂದು ಕರೆದಿದ್ದರು. ದೌರ್ಭಾಗ್ಯವೆನೆಂದರೆ ಈ ವಿಧವಾದ ಅಭಿಪ್ರಾಯಗಳನ್ನು ಹೊಂದಿದವರು, ಇಂತಹ ಗೋಡೆಗಳನ್ನು ಯೇಸು ಕೆಡವಿ ಹಕಿರುವನು ಎಂಬ ವಿಷಯವನ್ನರಿಯದೇ ಮುಂದಾಗಿದ್ದಾರೆ" (ಎಫೆಸ 2:14). ಆದ್ದರಿಂದ ನಾವೆಲ್ಲರೂ "ಕ್ರಿಸ್ತ ಯೇಸುವಿನಲ್ಲಿ ಒಂದಾಗಿದ್ದೇವೆ" (ಗಲಾತ್ಯ 3:26-28). ಕ್ರಿಸ್ತನಲ್ಲಿರುವವರು ಹಾಗೂ "ಕ್ರಿಸ್ತನಲ್ಲಿರದವರು" ಎಂಬ ಭಾಗಗಳು ಮಾತ್ರ ಇರುತ್ತವೆ.

(3) ದೇವರು ಎಲ್ಲವನ್ನು ನಿಯಂತ್ರಿಸುತ್ತಾನೆ.

ಆತನು "ಒಬ್ಬನಿಂದಲೇ ಎಲ್ಲಾ ಜನಾಂಗದವರನ್ನು ಸೃಷ್ಟಿಸಿದನೆಂದು ಅರಿತ ಮೇಲೆ ಸಕಲ ಜನಾಂಗಗಳು ಭೂಮಿಯ ಮೇಲೆ ಜೀವಿಸಲು ಸಾಧ್ಯವಾಯಿತು" ಎಂದು ಪೌಲನು ತಿಳಿಸಿದ ಮೇಲೆ "ದೇವರು ಅವರವರು ಇರತಕ್ಕ ಕಾಲಗಳನ್ನು ಅವರವರ ನಿವಾಸಗಳ ಮೇರೆಗಳನ್ನೂ ನಿಷ್ಕರ್ಷಿಸಿದನು" (ವಚನ 26).[14] ಈ ವಚನದ ಕುರಿತು ದಾನಿಯೇಲ 2:21ರಲ್ಲಿ ಉತ್ತಮ

ವಾದ ವಿವರಣೆ ನೀಡಲಾಗಿದೆ: "ಕಾಲ ಸಮಯಗಳನ್ನು ಮಾರ್ಪಡಿಸುತ್ತಾನೆ, ರಾಜರನ್ನು ತಳ್ಳಿಸುತ್ತಾನೆ, ನಿಲ್ಲಿಸುತ್ತಾನೆ." ದೇವರು ಎಲ್ಲವನ್ನು ನಿಯಂತ್ರಿಸುತ್ತಾನೆಂಬ ಅರ್ಥವನ್ನು ಇಲ್ಲಿ ನೋಡುತ್ತೇವೆ. ಆತನು ಕಾಲ ಸಮಯಗಳನ್ನು ನೇಮಿಸಿರುವದು ಮಾತ್ರವಲ್ಲದೆ (14:17), ಅರಸರ ಆಡಳಿತದ ಕಾಲವನ್ನು ನೇಮಿಸುತ್ತಾನೆ. ಆತನು ಭೌಗೋಳಿಕವಾಗಿ ಸಮುದ್ರದ ಮೇರೆಗಳನ್ನು ನೇಮಿಸಿದಂತೆ ರಾಜಕೀಯ ಸ್ಥಾಪನೆಗಳನ್ನು ನಿಯಂತ್ರಿಸುತ್ತಾನೆ. ದೇವರು ಲೋಕವನ್ನು ನಿರ್ಮಿಸಿ ನಂತರ ಈ ಸ್ಥಳವನ್ನು ಬಿಟ್ಟುಹೋಗದೆ; ಮನುಷ್ಯರ ಆಗು ಹೋಗುಗಳಲ್ಲಿ ಕಾರ್ಯನಿರ್ವಹಿಸುತ್ತಾನೆ. ಅಥೇನಿಯರು ಈ ವಿಷಯವನ್ನು ಗ್ರಹಿಸದಿದ್ದರೂ ಈ *ತಿಳಿಯದ* ದೇವರು ಇತಿಹಾಸದಲ್ಲಿ ಅವರಿಗೆ ಗೌರವ ಸ್ಥಾನವನ್ನು ನೀಡಿದ್ದನು![15]

**ಮನುಷ್ಯ ಮಾಡಲೇಬೇಕಾದದ್ದೇನು**

ದೇವರ ಕಾರ್ಯಗಳನ್ನು ಪ್ರಕಟಿಸಿದ ನಂತರ ಪೌಲನು ಮನುಷ್ಯ ಮಾಡಲೆಬೇಕಾದದ್ದೇನು ಎಂದು ತಿಳಿಸುತ್ತಿರುವನು:

(1) ಮನುಷ್ಯನು ದೇವರನ್ನೇ ಹುಡುಕಬೇಕು.[16]

ವಚನ 27 "ಮನುಷ್ಯನು" "ದೇವರನ್ನು ಹುಡುಕಬೇಕು" ಎಂದು ಪ್ರಾರಂಭಿಸುತ್ತದೆ. ಈಗಾಗಲೇ ತಿಳಿಸಿರುವ ಸತ್ಯಕ್ಕೆ ಇಂಗ್ಲೀಷ್ ಭಾಷೆಯಲ್ಲಿ "ಅದು" ಎಂಬ ಪದವಿದೆ.[17] ಸಕಲವನ್ನು ದೇವರು ಉಂಟು ಮಾಡಿ ಮತ್ತು ಅವೆಲ್ಲವುಗಳನ್ನು ಆತನು ನಿಯಂತ್ರಿಸುವ ಮೂಲಕ ನಾವು ಆತನನ್ನು ಹುಡುಕಬೇಕೆಂದು ಪ್ರೋತ್ಸಾಹಿಸುತ್ತಾನೆ.[18] ಲೋಕದಲ್ಲಿರುವ ಸ್ಥಾನಮಾನವನ್ನಾಗಲಿ, ಆಸ್ಥಿಯನ್ನಾಗಲಿ, ಅಥವಾ ಆಶೀರ್ವಾದಗಳನ್ನಾಗಲಿ ಹೊಂದಿಕೊಳ್ಳಬೇಕೆಂದು ನಮ್ಮನ್ನು ಬಿಡದೆ, ದೇವರನ್ನು ಹುಡುಕುವದಕ್ಕಾಗಿಯೇ ನಾವು ಈ ಲೋಕದಲ್ಲಿದ್ದೇವೆ![19] ದೇವರು ನಮ್ಮ ಸೇವೆಯನ್ನು ಬಯಸದೇ (ವಚನ 25). ನಮ್ಮ ಅನ್ಯೋನ್ಯತೆಯನ್ನು ಬಯಸುತ್ತಾನೆ!

ಪೌಲನ ಮುಂದಿನ ಮಾತುಗಳು ಅಥೇನಿಯದ ತತ್ವಜ್ಞಾನಿಗಳ ಕುರಿತಾಗಿರದೆಯಿದ್ದರೆ ನಾನು ನಿಸಹಾಯಕನು, ಆದರೆ ನಾನು ಆಶ್ಚರ್ಯಪಡುತ್ತೇನೆ, "ಒಂದು ವೇಳೆ ಅವರು ತಡವಾಡಿ ಕಂಡುಕೊಂಡಾ ರೇನೋ ಎಂದು ತನ್ನನ್ನು ಹುಡುಕುವವರನ್ನಾಗಿ ಮಾಡಿದನು. ಆತನು ನಮ್ಮಲ್ಲಿ ಒಬ್ಬನಿಗೂ ದೂರವಾದವನಲ್ಲ" (ವಚನ 27ಬಿ). ತತ್ವಜ್ಞಾನಿಗಳು ಸತ್ಯವನ್ನು ಹುಡುಕುತ್ತಿದ್ದು. ಆದರೆ - ಮಾನುಷ್ಯಜ್ಞಾನದಿಂದ ಹುಡುಕುತ್ತಾ - ಅವರು ಕತ್ತಲಿನಲ್ಲಿ ಸೇರಿದವರಾದರು. ಇದಕ್ಕೆ ಸಂಬಂಧಪಟ್ಟಂತ ಕಣ್ಣಿಗೆ ಬಟ್ಟೆ ಕಟ್ಟಿಕೊಡಂತ ಮಕ್ಕಳು ಕೊಠಡಿಯಲ್ಲಿ ಆಟವಾಡುತ್ತಾ, "ಕತ್ತೆಯ ಬಾಲಕ್ಕೆ ಕಟ್ಟುವಂತಿತ್ತು."[20] ಕಣ್ಣಿಗೆ ಕಟ್ಟಿರುವಾಗ ಕಷ್ಟವಾಗುತ್ತದೆ. ಕಟ್ಟಿರದಿದ್ದರೆ ಸುಲಭವಾಗುತ್ತದೆ. ಒಂದು ವೇಳೆ ಈ ತತ್ವಜ್ಞಾನಿಗಳು ದೇವರು ಅವರಿಗೆ ಪ್ರಕಟಗೊಂಡನು ಎಂಬುದನ್ನು ಒಪ್ಪಿಕೊಂಡು, ಅವರ ಸ್ವಾರ್ಥದ ಕುರುಡತನವನ್ನು ಬಿಟ್ಟುಬಿಟ್ಟರೆ "ಆತನು ಅವರಲ್ಲಿ ಒಬ್ಬನಿಗೂ ದೂರವಾದವನಾಗಿರಲಿಲ್ಲ."

ದೇವರು ಎಷ್ಟು ಸಮೀಪಸ್ಥನಾಗಿರುತ್ತಾನೆ? "[ನಾನು] ಆತನಲ್ಲಿ ನಾವುಗಳಿದ್ದು ಆತನಲ್ಲಿಯೇ ನಾವು ಜೀವಿಸುತ್ತೇವೆ ಚಲಿಸುತ್ತೇವೆ ಇರುತ್ತೇವೆ" (ವಚನ 28ಎ). ಪೌಲನು ಸ್ತೋಯಿಕರ ವಸ್ತು ಆಧಾರಿತ ಪ್ಯಾಂಥೆಸಿಯಂ ಎಂಬ ತತ್ವವನ್ನು ಪ್ರಕಟಿಸಿದನೆಂದು ಅಕ್ಷೇಪಿಸಿರಬಹುದು, "ಆದರೆ ಪೌಲನ ತತ್ವವು ಸ್ತೋಯಿಕರ ತತ್ವಕ್ಕಿಂತ ಅಮೋಘವಾದದ್ದು ಮತ್ತು ವಾಕ್ಯದ ಪ್ರಕಾರ ಅದು ವ್ಯಕ್ತಿಗತವಾಗಿದ್ದು ಸರ್ವವ್ಯಾಪಿಯಾದ ದೇವರು ತನ್ನ ಶಕ್ತಿಯ ವಾಕ್ಯದಿಂದ ಸಮಸ್ತಕ್ಕೆ ಆಧಾರವು ಆಗಿದ್ದಾನೆ" (ಇಬ್ರಿಯ 1:3) - ಅದರಲ್ಲಿ ನಾವು ಸಹ ಸೇರ್ಪಡೆಯಾಗಿದ್ದೇವೆ![21]

ಈ ಸಮೀಪಸ್ಥನಾದ ದೇವರ ಕುರಿತ ಈ ವಿಷಯವು ಅವನ ಕೇಳುಗರಿಗೆ ಅರ್ಥೈಯಿಸಲು ಕಷ್ಟವಾಯಿತು, ಆದ್ದರಿಂದ ಪೌಲನು ಅವರ ಕಿವಿಗಳಲ್ಲಿ ಕೆಲವರು ಆತನ

ವಾಕ್ಯದೊಂದಿಗೆ ಸಮ್ಮತಿಸಿದರು ಎಂದು ಹೇಳಿದನು: "ಆತನಲ್ಲಿಯೇ ನಾವು ಜೀವಿಸುತ್ತೇವೆ, ಚಲಿಸುತ್ತೇವೆ ಇರುತ್ತೇವೆ. ನಿಮ್ಮ ಕವಿಗಳಲ್ಲಿಯೂ ಕೆಲವರು - ನಾವು ಆತನ ಸಂತಾನದ ವರೇ ಎಂಬುದಾಗಿ ಹೇಳಿದ್ದಾರೆ" (ವಚನ 28ಬಿ). ಪೌಲನು ಇಬ್ಬರು ಕವಿಗಳ ಹೇಳಿಕೆಯನ್ನು ತಿಳಿಸಿದನು. "ನಿನ್ನಲ್ಲಿಯೇ ಜೀವಿಸುತ್ತೇವೆ. ನಿನ್ನಲ್ಲಿಯೇ ಚಲಿಸುತ್ತೇವೆ ಮತ್ತು ನಿನ್ನಲ್ಲಿಯೇ ಇರುತ್ತವೆ." ಎಂಬ ಎಫಿಮಂಡಿಸನ[22] (ಹೋಲಿಸು ಕ್ರಿ.ಪೂ. 600) ಕವಿತೆಯಿಂದ ತಿಳಿಸಿರವನು. ಎರಡನೆಯದಾಗಿ ಅರ್ಥಸನ[23] (ಜನನ ಕ್ರಿ.ಪೂ. 310) ಬರವಣಿಗೆಲ್ಲಿರುವ: "ನಾವು ಆತನ ಸಂತಾನದವರೇ"[24] ಎಂಬ ಹೇಳಿಕೆಯನ್ನು ನೆನಪಿಸಿರುವನು. ಇಲ್ಲಿ ಯೆಹೋವನನ್ನು ಕುರಿತು ದೇವತೆ ಎಂಬ ಪದವನ್ನು ಉಪಯೋಗಿಸದೇ (ಅವರು ತಿಳಿದಿದ್ದ "ತಿಳಿಯದ" ದೇವರಿಗೆ) ಅವರ ಪ್ರಮುಖ ದೇವರಾದ ದ್ಯೌಸ್ ದೇವತೆಗೆ ಸೂಚನೆಯಾಗಿದೆ. ಯೆಹೋವನನ್ನು ದ್ಯೌಸ್ ದೇವತೆಗೆ ಹೋಲಿಸಬೇಕೆಂದು ಪೌಲನು ಹೇಳದೇ, ಮನುಷ್ಯನು ದೇವರೊಂದಿಗೆ ವೈಯಕ್ತಿಕವಾದಂತ ಸಂಬಂಧವನ್ನು ಹೊಂದಿರಬೇಕೆಂಬ ಮನುಷ್ಯರ ತತ್ವವನ್ನೇ ತಿಳಿಸಿ, ಅವನು ಬೋಧಿಸುತ್ತಿದ್ದ ಸತ್ಯ ದೇವರ ಕುರಿತು ಅವರ ಯೋಚನೆಯು ಸೂಕ್ತವಾದದ್ದು ಎಂದು ತಿಳಿಸಿದನು.

(2) ಮನುಷ್ಯನು ಯೋಗ್ಯ ರೀತಿಯಲ್ಲಿ ಆರಾಧಿಸಬೇಕು.

ತಿಳಿಯದ ದೇವರ ಸ್ವರೂಪದ ಕುರಿತು ಮಾತನಾಡಿದ ನಂತರ, ಒಬ್ಬನೇ ದೇವರನ್ನು ಆರಾಧಿಸುವ ವಿಷಯಕ್ಕೆ ಪೌಲನು ಮುಂದಾದನು. ನಮ್ಮಲ್ಲಿರುವ ದೇವರ ತಿಳುವಳಿಕೆಗೆ ಅನುಗುಣವಾಗಿ ನಾವುಗಳು ದೇವರನ್ನು ಆರಾಧಿಸುತ್ತೇವೆ.

ಈಗಾಗಲೇ ಪೌಲನು ಆರಾಧನೆಯ ಕುರಿತು ಅನೇಕ ಬಾರಿ ಮಾತನಾಡಿದ್ದಾನೆ: ಈ ಪಾಠದ ಆರಂಭದಲ್ಲಿಯೇ, ಅವರು ಈಗಾಗಲೇ ತಿಳಿಯದ ದೇವರನ್ನು "ತಿಳಿಯದೇ" ಪೂಜಿಸುತ್ತಿದ್ದರೆಂಬ ಮಾತನ್ನು ತಿಳಿಸಿದನು (ವಚನ 23). "ಆತನು ಕೈಯಿಂದ ಕಟ್ಟಿರುವ" ಗುಡಿಗಳಲ್ಲಿ ವಾಸ ಮಾಡುವವನಲ್ಲ, ಮನುಷ್ಯರ ಕೈಗಳಿಂದ ಸೇವೆಯನ್ನು ಹೊಂದುವವನಲ್ಲ (ವಚನಗಳು 24, 25) ಎಂದು ಒತ್ತಿ ಹೇಳಿದನು. ಸಕಲವನ್ನು ದೇವರು ಉಂಟು ಮಾಡಿದನು (ವಚನಗಳು 25, 26) ಆದ್ದರಿಂದ ಎಲ್ಲರೂ ಒಂದೇ ದೇವರನ್ನು, ಒಂದೇ ವಿಧದಲ್ಲಿ ಆರಾಧಿಸಬೇಕೆಂಬ ನಿರ್ಣಯವನ್ನು ತಿಳಿಸಿದ್ದನು. ಈಗ ಅಥೇನದವರು ಅವನ ಮಾತಿನ ಅರ್ಥವನ್ನು ತಿಳಿಯದೆ ಹೋದದ್ದರಿಂದ ವಿಗ್ರಹಾರಾಧನೆಯ ಅವರ ಹೃದಯಗಳಿಗೆ ಕಠಿಣವಾಗಿ ಮಾತನಾಡಿದನು: "ನಾವು ದೇವರ ಸಂತಾನದವರಾಗಿದ್ದ ಮೇಲೆ ದೈವವು ಮನುಷ್ಯನ ಶಿಲ್ಪ ವಿದ್ಯೆಯಿಂದಲೂ, ಕಲ್ಪನೆಯಿಂದಲೂ ಕೆತ್ತಿರುವ ಚಿನ್ನ ಬೆಳ್ಳಿ[25] ಕಲ್ಲುಗಳಿಗೆ ಸಮಾನವೆಂದು ನಾವು ಭಾವಿಸಬಾರದು (ವಚನ 29). ಕೀಳುದರ್ಜೆಯವನು (ಮಾನವ) ಮೇಲ್ದರ್ಜೆಯವನನ್ನು (ದೇವರು) ಸೃಷ್ಟಿ ಮಾಡಲು ಸಾಧ್ಯವೆ? ಜೀವಿಸುವವರಾದ ನಾವು ಶ್ವಾಸವನ್ನು ಹೊಂದಿ ಚಲಿಸುವವರಾದ ನಮ್ಮನ್ನು ದೇವರ ಸ್ವರೂಪದಲ್ಲಿ ಸೃಷ್ಟಿಮಾಡಲ್ಪಟ್ಟಿರುವಾಗ, ತಣ್ಣಗಾದ ಸತ್ತಿರುವ ವಸ್ತುವಿನಿಂದ ಮಾಡಲ್ಪಟ್ಟಿರುವದನ್ನು ದೇವರೆಂದು ಕರೆಯಬಹುದೇ?

ಅದು ಧೈರ್ಯದ ಮಾತಾಗಿತ್ತು. ಬಹುಶಃ ಅವಮಾನದ ಮಾತು ಆಗಿರಬಹುದು[26] ಅಥೇನಿಯ ಪಟ್ಟಣವು ಬಹು ಬೆಲೆಯುಳ್ಳ ಶಿಲೆಗಳಿಂದ ಮಾಡಲ್ಪಟ್ಟ ಪ್ರತಿಮೆಗಳನ್ನು ಹೊಂದಿರುವಾಗ, ಅಲ್ಲಿದ್ದಂತ ಜನರು ಚಿನ್ನ ಬೆಳ್ಳಿಯ ಚಿಕ್ಕ ವಿಗ್ರಹಗಳನ್ನು ಹೊಂದಿದವರಾಗಿದ್ದರು - ದಂತದ ಹಾಗೂ ಚಿನ್ನದ ವಿಗ್ರಹಗಳನ್ನು ಹೊಂದಿದ್ದರು.

(3) ಮನುಷ್ಯನು ಮಾನಸಾಂತರ ಪಡಬೇಕು.

ಪೌಲನು ತನ್ನ ನಿರ್ಣಯವನ್ನು ಧೈರ್ಯವಾಗಿ ತೋರಿದನು. ಅವನ ಮಾತುಗಳು ಸತ್ಯವಾದವು, ಅಥೇನಿಯರ ಮೂಢನಂಬಿಕೆಯ ಆರಾಧನೆಯು ಯೋಗ್ಯವಾದದ್ದಲ್ಲ, ಅವರು ಒಬ್ಬನೇ ಒಬ್ಬ ಹಾಗೂ ಸತ್ಯ ಮತ್ತು - ಜೀವವುಳ್ಳ ದೇವರನ್ನು ಆರಾಧಿಸಬೇಕಿದ್ದರೆ, ಬದಲಾವಣೆಯೇ ಅವರಿಗೆ ಮಾರ್ಗವಾಗಿತ್ತು: "ಈಗಲಾದರೋ ಆತನು ನಾಲ್ಕು ದಿಕ್ಕಿನಲ್ಲಿರುವ

ಮನುಷ್ಯರೆಲ್ಲರೂ ತನ್ನ ಕಡೆಗೆ ತಿರುಗಿಕೊಳ್ಳಬೇಕೆಂದು[27] ಅಪ್ಪಣೆ ಕೊಡುತ್ತಾನೆ" (ವಚನ 30). ಪೌಲನು ಮೂರನೆಯ ಸಾರಿ "ಅಜ್ಞಾನ" ಎಂಬ ಗ್ರೀಕ್ ಪದವನ್ನು ಬಳಸುತ್ತಿರುವನು. (1) ದೇವರನ್ನು "ತಿಳಿಯದ ದೇವರೆಂದು" ಎಂದು ಕರೆದು ತಮ್ಮ ಅಜ್ಞಾನವನ್ನು ತೋರ್ಪಡಿಸಿದ್ದರು (ವಚನ 23ಎ). (2) ಆತನನ್ನು "ಅಜ್ಞಾನದಿಂದ" ಆರಾಧಿಸಿದರು (ವಚನ 23ಬಿ). (3) ದೇವರು ಅವರ "ಅಜ್ಞಾನವನ್ನು" ಸಹಿಸಿಕೊಂಡಿದ್ದನು, ಮತ್ತು ಇನ್ನು ಮುಂದೆ ಸಹಿಸಲಾರದೆ ಇದ್ದನು, ದೇವರು ತನ್ನನ್ನು ಅವರಿಗೆ ಪ್ರಕಟಪಡಿಸಿದ್ದನು; ಈಗ ಅವರ ಅಜ್ಞಾನಕ್ಕೆ ಯವುದೇ ಕಾರಣವಿರಲಿಲ್ಲ.[28]

"ದೇವರು ಅವರ ಅಜ್ಞಾನವನ್ನು ಎಲ್ಲಿಯವರೆಗೆ ಸಹಿಸಿಕೊಂಡನು?" ಎಂಬ ಪ್ರಶ್ನೆಯನ್ನು ಕೆಲವು ವಿವರಣೆಕಾರರು ಕೇಳುತ್ತಾರೆ. ನಾನು ದೇವರ ಆಲೋಚನೆಯನ್ನು ಅರಿಯದವನಾಗಿರುವದರಿಂದ (ಯೆಶಾಯ 55:8, 9), ಈ ಪ್ರಶ್ನೆಗೆ ಉತ್ತರಿಸಲಾರೆ. ದೇವರು ಇನ್ನೆಂದಿಗೂ ಅಜ್ಞಾನವನ್ನು ಪುರಸ್ಕರಿಸದೆ ಇರುವದರಿಂದ, ಈ ಪ್ರಶ್ನೆಗೆ ನಾನು ಉತ್ತರಿಸುವ ಅಗತ್ಯತೆಯಿಲ್ಲ; ದೇವರು ಈ ದಿನಗಳಲ್ಲಿ ಈ ವಿಷಯದ ಕುರಿತು ಹಾಗೆ ಮಾಡುವನು ಎಂಬ ಪ್ರಶ್ನೆ ಉದ್ಭವಿಸುವದಿಲ್ಲ, ಆದರೆ ಒಂದು ಚಿಕ್ಕ ದೃಷ್ಟಾಂತವನ್ನು ಮಾತ್ರ ಹೋಲಿಸಿ ತಿಳಿಸುವೆನು: ನನ್ನ ಎರಡು ಹೆಣ್ಣು ಮಕ್ಕಳು ಚಿಕ್ಕವರಿರುವಾಗ, ಅವರ ವರ್ತನೆಗಳನ್ನು ನಿರ್ಲಕ್ಷಿಸಿದಂತೆ, ಅವರು ದೊಡ್ಡವರಾದ ಮೇಲೆ ನಿರ್ಲಕ್ಷಿಸಲಿಲ್ಲ. ಹಿಂದಿನ ಕಾಲದಲ್ಲಿ ಮನುಷ್ಯನು ಮುಗ್ಧನಾಗಿದ್ದರಿಂದ, ಅವನ ಕೆಲವು ವರ್ತನೆಗಳನ್ನು ದೇವರು ನಿರ್ಲಕ್ಷಿಸಿದನು. ಆದರೆ ಈಗ ದೇವರು ಎಂದಿಗೂ ನಿರ್ಲಕ್ಷಿಸುವವನಲ್ಲ (ಮತ್ತಾಯ 19:8, 9). ದೇವರು ಮಾನವ ಕುಲಕ್ಕೆ ಹೇಳುವದೇನೆಂದರೆ, ಸರಿ ಮತ್ತು ತಪ್ಪುಗಳನ್ನು ಅರಿಯಲು, "ನೀನು ಸಾಕಷ್ಟು ದಿವಸಗಳನ್ನು ಈ ಭೂಮಿಯಲ್ಲಿ ಕಳೆದಿರುವಿ; ಆದ್ದರಿಂದ ನಿನ್ನ ಎಲ್ಲಾ ನಡವಳಿಕೆಗಳಿಗೆ ನೀನು ಉತ್ತರ ನೀಡಲೇಬೇಕು"!

ನೀತಿವಂತರೆಂದು ತಿಳಿದ ಸಭಾಮಂಡಳಿಯವರು ಮಾನಸಾಂತರ ಪಡಬೇಕೆಂದು ಪೇತ್ರನು ಆದೇಶಿಸಿದನು (5:31). ಅವರು ರೌದ್ರರಾಗಿ, ಅವರನ್ನು ಕೊಲ್ಲಬೇಕೆಂದಿದ್ದರು (5:33). ಈಗ ಪೌಲನು ಸ್ವಾರ್ಥಿಗಳಾದ ತತ್ವಜ್ಞಾನಿಗಳಿಗೆ, "ಅವರು ಅಂತರ್ಯದಲ್ಲಿ ಮಾನಸಾಂತರ ಪಡಬೇಕೆಂಬ ಅಂಶವನ್ನು ತಿಳಿಸಿದನು. ಅಂದರೆ ಪಾಪದ ವಿಷಯದಲ್ಲಿ ಪರಿವರ್ತನೆಗೊಂಡು, ಪಾಪಕ್ಕಾಗಿ ಯಥಾರ್ಥವಾದ ದುಃಖವನ್ನು ತೋರ್ಪಡಿಸಿ, ತಮ್ಮ ಜೀವಿತವನ್ನು ಬದಲಾಯಿಸಿಕೊಳ್ಳಬೇಕೆಂದು ತಿಳಿಸಿದನು."[29] ಮುಖ್ಯವಾಗಿ ಅವನ ಕೇಳುಗರು ವಿಗ್ರಹಗಳಿಂದ ಪ್ರತ್ಯೇಕವಾಗಿ ದೇವರ ಕಡೆಗೆ ತಿರುಗಿಕೊಳ್ಳಬೇಕೆಂದು ಎಚ್ಚರಿಸಿದನು (1 ಥೆಸಲೋನಿಕ 1:9).

ಪೌಲನ ದಿವಸಗಳಲ್ಲಿ, ಮಾನಸಾಂತರವೂ ಅತಿ ಅಗತ್ಯವಾದ ಸಂಗತಿಯಾಗಿತ್ತು, ನಮ್ಮ ದಿನಗಳಲ್ಲೂ ಅದು ಅಗತ್ಯದ ಸಂಗತಿಯೇ, *ವಾಟೆವರ್ ಬಿಕೇಮ್ ಆಫ್ ಸಿನ್?* ಎಂಬ ಪುಸ್ತಕದಲ್ಲಿ ಕಾರ್ಲ್ ಮೆನಿನ್‌ಂಜರ್, M.D., ಯವರು ಬರೆದು:

> ... ಹಿಂದಿನ ದಿವಸಗಳಲ್ಲಿ ಪ್ರವಾದಿಗಳು ಹಾಗೂ ಸ್ನಾನಿಕನಾದ ಯೋಹಾನನು ಜನರನ್ನು ಮಾನಸಾಂತರಕ್ಕೆ ಕರೆದ ರೀತಿಯಲ್ಲಿ, ಈ ದಿವಸಗಳಲ್ಲಿರುವ ಸಭಾನಾಯಕರು ಮಾಡುವರಾಗಿದ್ದಾರೆ. ಅವರು ಸಾರ್ವಜನಕರಿಗೆ, ಅವರು ಮಾನಸಾಂತರ ಪಡದೆ ಹೋದರೆ, ಬೆಂಕಿ, ಗಂಧಕಗಳ ಮಳೆಯ ಕುರಿತು ಹೇಳುತ್ತಾರೆ (ತೀವ್ರ ವಾದಿಗಳ ಹಾಗೆ) ಅವರು ಹೇಳುವಂಥದ್ದನ್ನು ಜನರು ಕೇಳಿ ಭಯಪಟ್ಟು ವೇದಿಕೆಯ ಮುಂದೆ ಬರಲು ಅಪೇಕ್ಷಿಸುವರು.[30]

ಈ "ಕ್ರೈಸ್ತ ಗುರುಗಳನ್ನು" ಮೆನಿನ್‌ಂಜರವರು ಮನುಷ್ಯರನ್ನು ಮೆಚ್ಚಿಸುವವರು (ಗಲಾತ್ಯ 1:10) ಪ್ರಕಾರ ಎಂದು ಕರೆದಿರುವರು, ಅವರು ಮನುಷ್ಯರನ್ನು ಮಾನಸಾಂತರಕ್ಕೆ ಕರೆಯಲು ಹಿಂಜರಿಯಬಹುದು, ಆದರೆ ಸುವಾರ್ತಿಕರು ಇದನ್ನು ಮಾಡಲು ಹಿಂಜರಿಯುವದಿಲ್ಲ. ಯೇಸು

"ಮಾನಸಾಂತರ" ಎಂಬ ಮೊದಲ ಪದದಿಂದ ಸುವಾರ್ತೆಯನ್ನು ಸಾರಲು ಆರಂಭಿಸಿದರು (ಮತ್ತಾಯ 4:17).

ಅಥೇನದವರ ತಿಳಿಗೇಡಿತನವನ್ನು ದೇವರು ನಿರ್ಲಕ್ಷ್ಯಮಾಡಿದ್ದನು ಎಂದು ಪೌಲನು ಈಗಾಗಲೇ ತಿಳಿಸಿದ್ದನು. ಅವನು ವರ್ತಮಾನದ ವಿಷಯವನ್ನು ತಿಳಿಸಿದ್ದನು: "ಅವರು ಮಾನಸಾಂತರ ಪಡಬೇಕೆಂದೂ ತಿಳಿಸಿದ್ದನು ..." ಯಾಕಂದರೆ ಆತನು ನಿಷ್ಕರ್ಷೆಮಾಡಿದ ಪುರುಷನ ನೀತಿಗನುಸಾರವಾಗಿ ಭೂಲೋಕದ ನ್ಯಾಯವಿಚಾರಣೆ ಮಾಡುವದಕ್ಕೆ "ಒಂದು ದಿನವನ್ನು" ಗೊತ್ತು ಮಾಡಿದ್ದಾನೆ[31] (ವಚನ 31ಎ). ಎಫಿಕೂರಿಯವರು ಜೀವನದ ಬಗ್ಗೆ ಹೇಳುತ್ತಿದ್ದ ತತ್ವವು ಇನ್ನು ಇಲ್ಲದಾಗುತ್ತಾ ಹೋಯಿತು ದೈವೀಕ ಮಾರ್ಗದಲ್ಲಿ, ಒಂದು ಮಾರ್ಗ ಇದೆ ಎಂಬ ಸ್ತೊಯಿಕರ ತತ್ವವಾಗಿತ್ತು ಆದರೆ "ದೇವ ನ್ಯಾಯಸ್ಥಾನದ ಮುಂದೆ ಜೀವನ ಯಾತ್ರೆ" ಎಂದು ಪೌಲನು ಪ್ರಕಟಿಸಿದನು.[32] ಆ "ತಿಳಿಯದ ದೇವರು" ಅವರೆಲ್ಲರ ಸೃಷ್ಟಿಕರ್ತನು ಎಂದು ಪೌಲನು ಪ್ರಸಂಗವನ್ನು ಆರಂಭಿಸಿದ್ದನು, ಆ ದೇವರೆ ಅವರ ನ್ಯಾಯಾಧಿಪತಿಯೆಂದು ಪ್ರಸಂಗವನ್ನು ಅಂತ್ಯಗೊಳಿಸಿದ್ದನು!

"ದೇವರ ಸತ್ಯ ಹಾಗೂ ಮನುಷ್ಯರ ಕುರಿತ" ಪರಿಚಯದಿಂದ ಪೌಲನು ಪ್ರಸಂಗವನ್ನು ಆರಂಭಿಸಿ, ಸಮಾಪ್ತಿಗೊಳಿಸಿದ್ದನು, ಯಾವುದೇ ಧರ್ಮಶಾಸ್ತ್ರದ ಹೇಳಿಕೆಯನ್ನು ನೀಡದೆ, ಒಂದರ ನಂತರ ಒಂದರಂತೆ, ವಾಕ್ಯದಿಂದ ತರ್ಕವನ್ನು ಪೌಲನು ಮಾಡಿದ್ದನು. ಹೇಗೂ, ಅವನು, "ಯೇಸುವಿನ ಕುರಿತಾದ" ಬಹು ಮುಖ್ಯವಾದ ಸತ್ಯವನ್ನು ಪರಿಚಯಿಸಲೇಬೇಕಿತ್ತು. "ಯಾಕಂದರೆ ಆತನು ನಿಷ್ಕರ್ಷ ಮಾಡಿದ *ಪುರುಷನ* ಕೈಯಿಂದ, ಅಂದರೆ ಸತ್ತವರೊಳಗಿಂದ ಎಬ್ಬಿಸಿದ, ಯೇಸುವಿನ ಮೂಲಕ ಲೋಕವನ್ನು ತೀರ್ಪುಮಾಡುವನು ಎಂಬ ಸತ್ಯವನ್ನು ಪ್ರಕಟಿಸಿದನು" (ವಚನ 31ಬಿ; ಒತ್ತಿ ಹೇಳಿದ್ದು ನನ್ನದು). ಯೇಸುವಿನ ಪುನರುತ್ಥಾನವು ಅನೇಕ ಉದ್ದೇಶಗಳನ್ನು ಈಡೇರಿಸುತ್ತಿತ್ತು;[33] ನ್ಯಾಯ ತೀರ್ಪು ಇದೆ ಎಂಬಂಥ ಮೂಲ ತತ್ವವನ್ನು ತಿಳಿಸುತ್ತಿತ್ತು! (ಸಂಘಗಳು ಪುನರುತ್ಥಾನವನ್ನು ಆಚರಿಸುವಾಗ, ಅವರು ನ್ಯಾಯ ತೀರ್ಪಿನ ಕುರಿತು ತಿಳಿಸುವರೇ!) ಪೌಲನು ಯೇಸುವನ್ನು ಆತನ ಪುನರುತ್ಥಾನವನ್ನು ಈ ಸಭೆಯ ಮುಂದೆ ಪ್ರಸಂಗಿಸಿದ್ದರಿಂದ, ಅವನನ್ನು ಈ ಸಭೆಯ ಮುಂದೆ ಕರೆತರಲಾಗುತ್ತಿತ್ತು (ವಚನ 18). ಈ ಎರಡು ಅಂಶಗಳನ್ನು ಪೂರ್ಣವಾಗಿ ಪ್ರಸಂಗಿಸಿ, ಅಂತ್ಯಗೊಳಿಸಿದನು![34]

ಪೌಲನು ಯೇಸುವನ್ನು ಕುರಿತು ರಕ್ಷಕನು ಎಂಬುದರ ಬದಲು, ನ್ಯಾಯಧಿಪತಿ ಎಂದು ಏಕೆ ಬೋಧಿಸಿದನು? ನಂಬಿಕೆಯ ಬದಲು, ಮಾನಸಾಂತರವನ್ನು ಏಕೆ ಆದೇಶಿಸಿದನು? ಪೌಲನ ಕಾರಣಗಳು ಏನೇ ಇರಬಹುದು, ಮೂರು ವಿಷಯಗಳಲ್ಲಿ ನಾವು ಭರವಸವಿಡಬಹುದು: (1) ಆ ನಿರ್ದಿಷ್ಟವಾದ ಸಮಯದಲ್ಲಿ, ನಿರ್ದಿಷ್ಟವಾದ ಸಂದೇಶ ವನ್ನು ಪರಿಶುದ್ಧಾತ್ಮನು ನೀಡಿದ್ದನು (ಮತ್ತಾಯ 10:19).[35] (2) ಪೌಲನ ಪ್ರಸಂಗವನ್ನು ಕೇಳಲು ಬಂದವರು (ವಚನ 32) ಅವನ ಪ್ರಸಂಗದಲ್ಲಿ ಯೇಸುವನ್ನು ಮತ್ತು ಶಿಲುಬೆಯ ಸಂದೇಶ ವನ್ನು ಆಲಿಸಿದರು (1 ಕೊರಿಂಥ 2:2). (3) ಮನುಷ್ಯನ ಸಂಪೂರ್ಣತೆಗೆ "ನಂಬಿಕೆಯು" ಹೇಗೆ ಸೂಚನೆಯಾಗಿದೆಯೋ, ಅದೇ ರೀತಿಯಲ್ಲಿ ಮಾನವ ಸಂಪೂರ್ಣತೆಗೆ ವಚನ 30ರ "ಮಾನಸಾಂತರವು" ಸೂಚನೆಯಾಗಿತ್ತು. ರಕ್ಷಣೆಗೆ, ದೀಕ್ಷಾಸ್ನಾನವು ಅವಶ್ಯವಲ್ಲ ಎಂದು ತರ್ಕಮಾಡುವವರು, ಪೌಲನ ಮಾರ್ಸ್ ಬೆಟ್ಟದ ಪ್ರಸಂಗದಲ್ಲಿ ರಕ್ಷಣೆಗೆ ಕ್ರಿಸ್ತನಲ್ಲಿರುವ ನಂಬಿಕೆಯು ಸೂಚಿಸಲಿಲ್ಲ ಆದ್ದರಿಂದ ರಕ್ಷಣೆಗೆ ನಂಬಿಕೆಯು ಅಗತ್ಯವಿಲ್ಲ ಎಂಬ ವಿಷಯವನ್ನು ತರ್ಕಮಾಡಬೇಕು. ವಾಕ್ಯವನ್ನು ಯಥಾರ್ಥವಾಗಿ ಅರ್ಥಮಾಡಿಕೊಳ್ಳುವವರು, ಪೌಲನು "ಇನ್ನೊಂದು ಸುವಾರ್ತೆಯನ್ನು" ಸಾರಲಿಲ್ಲ ಎಂಬುದನ್ನು ಅರ್ಥಮಾಡಿಕೊಳ್ಳಬೇಕು (ಗಲಾತ್ಯ 1:6). ಅಥೇನದವರು ಅವರ ಪಾಪದಿಂದ ರಕ್ಷಿಸಲ್ಪಡಬೇಕಿದ್ದರೆ ಇತರರು ಮಾಡಿದಂಥ ಪ್ರತಿಕ್ರಿಯೆಯನ್ನೇ ಮಾಡಬೇಕಿತ್ತು: ಅವರು ಯೇಸುವನ್ನು ನಂಬಬೇಕಿತ್ತು, ಪಾಪದ ಮಾನಸಾಂತರ ಹೊಂದಬೇಕಿತ್ತು, ನಂಬಿಕೆಯನ್ನು ಅರಿಕೆ ಮಾಡಬೇಕಿತ್ತು. ಅವರು

ಯೇಸುವನ್ನು ನಂಬಬೇಕಿತ್ತು, ಪಾಪದ ಮಾನಸಾಂತರ ಹೊಂದಬೇಕಿತ್ತು, ನಂಬಿಕೆಯನ್ನು ಅರಿಕೆ ಮಾಡಬೇಕಿತ್ತು, ದೀಕ್ಷಾಸ್ನಾನದಲ್ಲಿ ಸಮಾಧಿಯಾಗಬೇಕಿತ್ತು (ರೋಮಾಪುರ 6:3, 4).

## ಪ್ರತಿಕ್ರಿಯೆ (17:32-34)

ಈ ಹಿಂದಿನ ಪಾಠದಲ್ಲಿ, ಪೌಲನು ಯಥಾರ್ಥಹೃದಯಗಳನ್ನು ಹುಡುಕುತ್ತಾ ಅಥೇನಕ್ಕೆ ಬಂದನು ಎಂದು ಅಧ್ಯಯನ ಮಾಡಿದ್ದೆವು.[36] ಯಥಾರ್ಥ ಹೃದಯಗಳು ಒಳ್ಳೆಯ ನೆಲ ಆಳವಾದ ಶುದ್ಧವಾದ, ಹಾಗೂ ಫಲವತ್ತಾದ ನೆಲವಾಗಿರಬೇಕು (ಲೂಕ 8:4-15). ಅಥೇನದ ಭೂಮಿಯು ತಗ್ಗುಗಳಿಂದ ಕೂಡಿತ್ತು, ಅದು ಮೂಢನಂಬಿಕೆಗಳಿಂದ ಕಳೆಗಳಿಂದಲೂ, ಮಾನವನ ವಾದಗಳಿಂದಲೂ, ಮರಣವನ್ನು ಹೊಂದಿತ್ತು. ಲೂಕನು ಹೇಳಿದಂತೆ, "ಸತ್ತವರು ಎದ್ದು ಬರುವ ವಿಷಯವನ್ನು ಕೇಳಿದಾಗ ಕೆಲವರು ಅಪಹಾಸ್ಯ ಮಾಡಿದರು; ಬೇರೆ ಕೆಲವರು ನೀನು ಈ ವಿಷಯದಲ್ಲಿ ಹೇಳುವದನ್ನು ನಾವು ಇನ್ನೊಂದು ಸಾರಿ ಕೇಳುತ್ತೇವೆ ಅಂದರು; ಆದರೆ ಕೆಲವರು ಅವನನ್ನು ಅಂಟಿಕೊಂಡು ನಂಬಿದರು" (ವಚನಗಳು 32, 34ಎ). ಪ್ರಪಂಚದಲ್ಲಿ, ಸುವಾರ್ತೆಗೆ ಉಂಟಾಗುವ ಮೂರು ಪ್ರತಿಕ್ರಿಯೆಗಳನ್ನು ಪೌಲನು ತಿಳಿಸಿರುವನು.

**ಕೆಲವರು ಅಪಹಾಸ್ಯಮಾಡಿದರು**

"ಸತ್ತವರು ಎದ್ದು ಬರುವ ವಿಷಯವನ್ನು ಕೇಳಿದಾಗ ಕೆಲವರು ಅಪಹಾಸ್ಯ ಮಾಡಿದರು"[37] (ವಚನ 32ಎ). ಹೊಸದಾದ ಸಂಗತಿಯನ್ನು ಪರಿಶೀಲನೆ ಮಾಡುವ ಬದಲು ಕೆಲವು ಸಂಕುಚಿತ ಮನೋಭಾವದವರು ಆ ವಿಷಯದ ಕುರಿತು ಹಾಸ್ಯಮಾಡಿದರು. "ಆ ವಿಷಯದ ಕುರಿತು ಹಾಸ್ಯ ಮಾಡುವಾಗ ಅದು ನಿರ್ಲಕ್ಷಕ್ಕೆ ಒಳಗಾಗುತ್ತದೆ" ಎಂದು ಭಾವಿಸಿದ್ದರು.

"ಸತ್ತವರು ಎದ್ದು ಬರುವ" ವಿಚಾರವು ಸಭೆಯಲ್ಲಿ ಗೊಂದಲ ಉಂಟು ಮಾಡಿತು. ಈಗಾಗಲೇ ಅವರ ಹೀನವಾದ ವಿಗ್ರಹಗಳ ಬಗ್ಗೆ, ಅಂದರೆ ಅವರು ಶುದ್ಧ ಎಂಬುದಾಗಿ ತಿಳಿದಿದ್ದ ಈ ವಿಷಯದ ಬಗ್ಗೆ ಪೌಲನ ಮಾತುಗಳನ್ನು ತಾಳ್ಮೆಯಿಂದ ಆಲಿಸಿದ್ದರು, ಅದಕ್ಕಾಗಿ ಮಾನಸಾಂತರಪಡಬೇಕೆಂಬ ವಿಷಯವನ್ನು ಸಹಿಸಿಕೊಂಡಿದ್ದರು. "ಪಟ್ಟಣದಲ್ಲಿರುವ ಕೆಲವು - ಬೀಜ - ಹೆಕ್ಕುವವರು" ಪುನರುತ್ಥಾನದ ಕುರಿತು ಮಾತನಾಡಿದರು, ಅವರು ಈ ವಿಷಯದಿಂದ ಹಿಂಜರಿಯಲಿಲ್ಲ. ವಿವಿಧ ತರ್ಕವಾದಗಳನ್ನು ಈ ವಿಷಯದಲ್ಲಿ ಸ್ವಲ್ಪ ಮಟ್ಟಿಗೆ ಒಪ್ಪಿಕೊಂಡಿದ್ದರೆ, ಆದರೂ ದೈಹೀಕ ಪುನರುತ್ಥಾನವು ನಂಬಲಾಸದ್ಯ ಎಂದು ಅವರು ತಿಳಿದಿದ್ದರು. ನಿತ್ಯತ್ವದಲ್ಲಿ ನಂಬಿಕೆ ಇಟ್ಟವರೂ ಸಹ, ಭೂಲೋಕಕ್ಕೆ ಸಂಬಂಧಿಸಿದ ದೇಹ ಮತ್ತು ಆತ್ಮವು ಕೆಟ್ಟದ್ದು ಎಂದು ತಿಳಿದಿದ್ದರು. "ದೇಹವು ಒಂದು ಸೆರೆಮನೆಯೆಂದು ಗ್ರೀಕರು ನಂಬಿದ್ದರು," ಒಬ್ಬನು ತನ್ನ ದೇಹವನ್ನು ಬಿಟ್ಟು ಹೋಗುವಾಗ ಸಂತೋಷಗೊಳ್ಳುವನು ಎಂದು ತಿಳಿದಿದ್ದರು. ಆ ದೇಹವನ್ನು ಪುನಃ ಎಬ್ಬಿಸಿ, ಅದರಲ್ಲಿ ಪುನಃ ಜೀವಿಸುವ ಅಗತ್ಯವಿದೆ?[38] ವಿದ್ಯಾವಂತನಾದ ಒಬ್ಬ ಗ್ರೀಕನ ಆಲೋಚನೆಯ ಕುರಿತು ಒಬ್ಬ ಗ್ರೀಕ್ ಬರಹಗಾರನು ಬರೆದು: "ಒಬ್ಬ ಮನುಷ್ಯನು ಸತ್ತು ಅವನ ರಕ್ತವು ಭೂಮಿಯಲ್ಲಿ ಚೆಲ್ಲಿದ ನಂತರ, ಪುನರುತ್ಥಾನವು ಇರುವದಿಲ್ಲ."[39] ಆ ಹೇಳಿಕೆಯಲ್ಲಿ "ಪುನರುತ್ಥನದ" ಪದದ ಕುರಿತು ಅನಾಸ್ತಾಸಿಸ್ ಎಂಬ ಪದವನ್ನು ಬಳಸಲಾಗಿದೆ, ಪೌಲನು ಸಹ ಅದೇ ಪದವನ್ನು ಬಳಸಿರುವನು.[40]

ಅರಿಯೊಪಾಗದಲ್ಲಿದ್ದ ಹೀನೈಸಿ ಮಾತನಾಡುವವರ ಕೈಯಲ್ಲಿ ನಿಧಿ ಇದ್ದರೂ, ಅದು ಅವರ ಕೈಗಳಿಂದ ಜಾರಿ ಹೋದವು.

**ಕೆಲವರು ಕಾದುಕೊಂಡರು**

ಬೇರೆ ಕೆಲವರು - "ನೀನು ಈ ವಿಷಯದಲ್ಲಿ ಹೇಳುವದನ್ನು ನಾವು ಇನ್ನೊಂದು ಸಾರಿ ಕೇಳುತ್ತೇವೆ ಅಂದರು" (ವಚನ 32ಬಿ). ಫೇಲಿಕ್ಸನು ಹೇಳಿದಂತೆ, ಅವರೂ ಸಹ "ಈಗ

ಹೋಗು, ಸಮಯ ದೊರಕಿದಾಗ (ನಾವು) ನಿನ್ನನ್ನು ಕರೆಸುತ್ತೇವೆ ಅಂದರು'' (24:25). ಅವರಿಗೆ ನಿಜವಾಗಿ ಆಸಕ್ತಿ ಇದ್ದು, ಅಥವಾ ಸಹಾನುಭೂತಿಯಿಂದ ಅವನನ್ನು ನಿರಾಕರಿಸಿದರೆ? ಎಂಬುದನ್ನು ನಾನು ಅರಿಯೆನು. ದೇವರ ಕುರಿತಾಗಿ ಹೊಂದಿರುವ ವಿಳಂಬ ಪ್ರವೃತ್ತಿಯು ಬಹು ಅಪಾಯಕರವಾದದ್ದು.

**ಕೆಲವರು ನಂಬಿದರು**

''ಹೀಗಿರಲು ಪೌಲನು ಅವರ ಮಧ್ಯದಿಂದ ಹೊರಟು ಹೋದ ನಂತರ'' (ವಚನ 33),[41] ಅವನು ಹೇಳಿದ ವಿಚಾರವನ್ನು ತಾವುಗಳು ಯೋಚಿಸುವಂತೆ ಅವರನ್ನು ಬಿಟ್ಟು, ಜಿಗುಪ್ಸೆಗೊಂಡವನಾಗಿ ಪಕ್ಕದ ಬೆಟ್ಟವನ್ನು ಹತ್ತಿರಬಹುದು.[42] ಈ ರೀತಿಯಾಗಿದ್ದರೆ, ಮುಂದಿನ ವಚನಕ್ಕಾಗಿ ದೇವರಿಗೆ ಸ್ತೋತ್ರ ಮಾಡುತ್ತೇವೆ: ''ಕೆಲವರು ಅವನನ್ನು ಅಂಟಿಕೊಂಡು ನಂಬಿದರು, ನಂಬಿದವರಲ್ಲಿ ಅರಿಯೊಪಾಗದ ಸಭೆಯವನಾದ ದಿಯೊನುಸ್ಯನೂ ದಾಮರಿಯೆಂಬಾಕೆಯೂ ಇನ್ನು ಕೆಲವರೂ ಇದ್ದರು'' (ವಚನ 34). ಅದು ಸಮೃದ್ಧಿಯಾದ ಸುಗ್ಗಿಯಾಗಲಿಲ್ಲ, ಆದಾಗ್ಯೂ ಅದು ಸುಗ್ಗಿಯೇ - ಪೂರ್ಣ ಲೋಕದ ಲಾಭಕ್ಕಿಂತಲೂ, ಒಂದು ಆತ್ಮವು ಬಹು ಬೆಲೆಯುಳ್ಳದ್ದಾಗಿದೆ.

ಅಲ್ಲಿ ಪರಿವರ್ತನೆಗೊಂಡವರಲ್ಲಿ ಅರಿಯೊಪಾಗದ ಸಭೆಯವನಾದ ದಿಯೊನುಸ್ಯನೂ ಇದ್ದನು.[43] ಅವನು ಪಟ್ಟಣದ ಬಹು ಮುಖ್ಯ ವ್ಯಕ್ತಿಯಾಗಿದ್ದನು. ನಂತರ ದಾಮರಿಯೆಂಬ ಸ್ತ್ರೀಯಳೂ ಇದ್ದಳು.[44] ಲೂಕನು ಆಕೆಯ ಹೆಸರನ್ನು ತಿಳಿಸಿರುವುದರಿಂದ, ಆಕೆಯು ಪ್ರಮುಖ ಅಥವಾ - ಪ್ರಮುಖವಲ್ಲದ ಸ್ತ್ರೀ ಇರಬಹುದು.[45] ನಂತರ ಅಲ್ಲಿ ''ಇತರರೂ'' ಇದ್ದರು. ಪೌಲನು ಅಲ್ಲಿ ಸಂಕ್ಷೇಪವಾದ ಸಂದೇಶವನ್ನು ನೀಡುವದರಿಂದ, ಅವನು ಅಲ್ಲಿ[46] ಸಂಕ್ಷೇಪವಾದ ಸೇವೆಯನ್ನು ಹೊಂದಿದನು ಎಂದು ಲೂಕನು ತಿಳಿಸಿರುವನು ಅದು ಈ ಸೇವೆಯ ಪ್ರತಿಫಲ.

ಅಥೇನೆಯಲ್ಲಿ ಯಾರೂ ಸಹ ದೀಕ್ಷಾಸ್ನಾನ ಪಡೆಯಲಿಲ್ಲವೆಂದು ವಿವರಣೆಕಾರರು ತಿಳಿಸಿರುವರು. ಕೊರಿಂಥದವರಿಗೆ ಪೌಲನು ಹೇಳಿದ ಹೇಳಿಕೆಯನ್ನು ಅವಲಂಭಿಸಿ ಕೊರಿಂಥದ ಸ್ತೆಫನನ ಮನೆಯವರು (1 ಕೊರಿಂಥ 1:14-16; 16:17), ಅಖಾಯದ ಪ್ರಥಮ ಫಲ (1 ಕೊರಿಂಥ 16:15) (ಅಥೇನೆ ಮತ್ತು ಕೊರಿಂಥ ಇವೆರಡು ಅಖಾಯದಲ್ಲಿದ್ದವು). ಒಂದು ವೇಳೆ ಪೌಲನ ದಿವಸಗಳಲ್ಲಿ ಸ್ತೆಫನ ಮತ್ತು ಅವನ ಮನೆಯವರು ಅಥೇನೆಯನ್ನು ಸಂಧಿಸಿ, ಪೌಲನಿಂದ ಅಲ್ಲಿ ದೀಕ್ಷಾಸ್ನಾನ ಹೊಂದಿರಬಹುದು.[47] ಕೆಲವರು ''ನಂಬಿ'' ಅವನನ್ನು ''ಅಂಟಿಕೊಂಡರು'' ಎಂಬ ಹೇಳಿಕೆಯನ್ನು, ಇತರ ಪಟ್ಟಣದಲ್ಲಿ ಪರಿವರ್ತನೆಗೊಂಡವರ ಕುರಿತಾಗಿ ಹೇಳಿರುವಂಥ ಹೇಳಿಕೆಯಂತೆಯೇ ಇರಬಹುದು (13:48; 14:1; 17:4; 17:12); 17:34ರಲ್ಲಿ ಹೇಳಿರುವದು ಬೇರೆ ಎಂದು ನಿರ್ಧರಿಸುವುದಕ್ಕೆ ಯಾವ ಕಾರಣವುಯಿಲ್ಲ. ಜ್ಞಾನವುಳ್ಳವರು ಅನೇಕರು ಕ್ರೈಸ್ತರಾಗುವರು ಎಂದು ಹೇಳಲಿಲ್ಲ, ''ಅನೇಕರು ಅಲ್ಲ'' (1 ಕೊರಿಂಥ 1:26), ಎಂದರೆ ''ಯಾರು ಅಲ್ಲ'' ಎಂದು ಅರ್ಥವಲ್ಲ.

ಕೆಲವು ಕಾರಣಗಳಿಂದ, ಪೌಲನು ಅಥೇನೆಯಲ್ಲಿ ಸಭೆಯನ್ನು ಸ್ಥಾಪಿಸಲಿಲ್ಲವೆಂದು ವಿವರರಣೆಕಾರರು ವಿವರಿಸಿರಬಹುದು - ಯಾಕಂದರೆ ಆ ಪಟ್ಟಣದಲ್ಲಿ ಸಭೆಗಳು ಇದ್ದವು ಎಂಬ ಹೇಳಿಕೆಯನ್ನು ಹೊಸ ಒಡಂಬಡಿಕೆಯಲ್ಲಿ ನೀಡಿರುವದಿಲ್ಲ. ಹೊಸ ಒಡಂಬಡಿಕೆಯಲ್ಲಿ ತಿಳಿಸದೆ ಇರುವ ಅನೇಕ ಸಭೆಗಳನ್ನು ಪೌಲನು ಸ್ಥಾಪನೆ ಮಾಡಿದ್ದನು. ವಿವರಣೆಕಾರರು ಇದನ್ನು ಸಂಘಗಳ ಉದ್ದೇಶದಿಂದ ತಿಳಿಸಿರುವದಿಲ್ಲ. ಒಬ್ಬನು ಸುವಾರ್ತೆಗೆ ವಿಧೇಯನಾದರೆ, ದೇವರು ಅವನನ್ನು ಸಭೆಗೆ ಸೇರಿಸುವನೆಂದು ಸತ್ಯ ವೇದವು ತಿಳಿಸುತ್ತದೆ (ಅಪೊಸ್ತಲರ ಕೃತ್ಯಗಳು 2:47[48]). ಸುಮಾರು ಆರು ಜನರು ಅಥೇನದಲ್ಲಿ ಪರಿವರ್ತನೆಗೊಂಡಿದ್ದರು ಎಂದು ಲೂಕನು ತಿಳಿಸಿರುವನು;[49] ಅವರು ''ಸಂಘಟಿತರು'' ಅಥವಾ ''ಅಸಂಘಟಿತರೂ'' ಆಗಿರಬಹುದು ಆ ಜನರೇ ಆ ದಿನಗಳಲ್ಲಿ ಸಭೆಯಾಗಿರಬಹುದು. (ಇತಿಹಾಸದ ಪ್ರಕಾರ 2ನೇ ಶತಮಾನದಲ್ಲಿ

ಅಥೇನಿಯಲ್ಲಿ ಬಲವಾದ ಸಭೆಯಿತ್ತು. ಆ ಫಲಕ್ಕೆ ಪೌಲನು ಬೀಜವನ್ನು ಬಿತ್ತಲಿಲ್ಲ ಎಂದು ಯಾರಾದರು ಹೇಳಲು ಸಾಧ್ಯವೇ?)

ಅಥೇನದ, ಆ ಯಥಾರ್ಥ ಹೃದಯಗಳ ಬಗ್ಗೆ ಹೆಚ್ಚು ತಿಳಿಯಲು ನಾನು ಇಚ್ಚಿಸುತ್ತೇನೆ, ಆದರೆ ಲೂಕನು ಅದನ್ನು ತಿಳಿಸಿರುವದಿಲ್ಲ. ತರುವಾಯ ಪಶ್ಚಿಮದ ಭೂಮಿಯು ಉತ್ತಮವಾಗಿ ರಬಹುದೆಂದು ತಿಳಿದು, ಪೌಲನು ಅಲ್ಲಿಗೆ ಹೋದನು. ಕೊರಿಂಥದ ಚರಿತ್ರೆಯನ್ನು ಮುಂದೆ ಗಮನಿಸುತ್ತೇವೆ.

## ಮುಕ್ತಾಯ

"ತಿಳಿಯದ ದೇವರನ್ನು" ಪ್ರಚುರ ಪಡಿಸಿದ್ದಕ್ಕಾಗಿ ಸಂತೋಷಿಸಿರಿ! "ಆತನಲ್ಲಿಯೇ ನಾವು ಜೀವಿಸುತ್ತೇವೆ, ಚಲಿಸುತ್ತೆವೆ, ಇರುತ್ತೇವೆ" (ವಚನ 28; KJV). ಈಗ ನಾವು ನಮ್ಮ ಸ್ವಾರ್ಥದ ಜೀವಿತವನ್ನು ತೊರೆದು ದೇವರ ಕಡೆಗೆ ತಿರುಗಿಕೊಳ್ಳೋಣ. "ಆ ಅಜ್ಞಾನ ಕಾಲಗಳನ್ನು ದೇವರು ಲಕ್ಷ್ಯಕ್ಕೆ ತರಲಿಲ್ಲ; ಈಗಲಾದರೋ ಆತನು ನಾಲ್ಕು ದಿಕ್ಕಿನಲ್ಲಿರುವ ಮನುಷ್ಯರೆಲ್ಲರೂ ತನ್ನ ಕಡೆಗೆ ತಿರುಗಿಕೊಳ್ಳಬೇಕೆಂದು ಅಪ್ಪಣೆಕೊಡುತ್ತಾನೆ" (ವಚನ 30). ನಿನಗೆ ಮಾನಸಾಂತರದ ಅಗತ್ಯತೆಯಿದ್ದರೆ? ಈ ಪಾಠವು ನಿನಗಾಗಿಯೇ ಇರುತ್ತದೆ.

ನಿನ್ನ ಪ್ರತಿಕ್ರಿಯೆ ಏನು? ನಿರ್ಧಾರವನ್ನು ಮುಂದಕ್ಕೆ ಹಾಕಿದವರಂತೆ ನೀನು ಇರುವೆಯಾ? ಅಥವಾ, ಅದಕ್ಕೆ ಸ್ಪಂದನ ಮಾಡುವಿಯಾ? ಅಥವಾ ಕೆಲವರು ನಂಬಿ ವಿಧೇಯರಾದ ಹಾಗೆ ಮಾಡುವಿಯಾ? ಈಗಲೇ, ಯೇಸುವನ್ನು ನಿನ್ನ ರಕ್ಷಕನನ್ನಾಗಿ ಅಂಗೀಕರಿಸಿಕೋ, ಇಲ್ಲದೆ ಹೋದರೆ ಮುಂದೆ ಆತನು ನಿನಗೆ ನ್ಯಾಯಾಧಿಪತಿಯಾಗುವನು. ಇಲ್ಲವಾದರೆ "ಭೂಲೋಕದ ನ್ಯಾಯ ವಿಚಾರಣೆ ಮಾಡುವದಕ್ಕೆ ದೇವರು ಒಂದು ದಿನವನ್ನು ಗೊತ್ತುಮಾಡಿರುವನು" (ವಚನ 31). ಪುನರುತ್ಥಾನವು ಅದನ್ನು ದೃಢಪಡಿಸಿರುತ್ತದೆ.

## ಪ್ರಸಂಗದ ಟಿಪ್ಪಣಿ

"ಮನುಷ್ಯನ ಗೊಂದಲಮಯವಾದ ಪ್ರಶ್ನೆಗಳಿಗೆ, ಪರಲೋಕದ ಸರಳವಾದ ಉತ್ತರ" ಎಂಬ ತಲೆಬರಹವನ್ನು ಪೌಲನ ಪ್ರಸಂಗದ ಕುರಿತು ನೀಡಬಹುದು. (1) "ನಾನು ಎಲ್ಲಿಂದ ಬಂದಿರುವೆ?" (ದೇವರು ನನ್ನನ್ನು ಸೃಷ್ಟಿಸಿರುವನು) (ವಚನ 24-26). (2) "ನಾನು ಏಕೆ ಇಲ್ಲಿರುವೆನು?" (ದೇವರನ್ನು ಹುಡುಕುವದಕ್ಕೆ) (ವಚನ 27-29). (3) "ನಾನು ಎಲ್ಲಿಗೆ ಹೋಗುತ್ತಿರುವೆನು?" (ನ್ಯಾಯ ತೀರ್ಪಿಗೆ) ಎಂಬ ಅಂಶಗಳಿಂದ ವಿಂಗಡಿಸಬಹುದು. (1) ಮಾನವನ ಮೂಲ, (2) ಮನುಷ್ಯನ ಉದ್ದೇಶ, ಹಾಗೂ (3) ಮನುಷ್ಯನ ಗುರಿ ಎಂಬ ಅಲೋಚನೆಗಳನ್ನು ಸಹ ಹೊಂದಬಹುದು.

ಪೌಲನ ಪ್ರಸಂಗವನ್ನು ವಾರೆನ್ ವೆರ್ಸ್ಬಿಯವರು: (1) ದೇವರ ಮಹತ್ವ (ಸೃಷ್ಟಿ ಕರ್ತನು) (ವಚನ 24), (2) ದೇವರ ಸದ್ಗುಣ (ಒದಗಿಸುವವನು) (ವಚನ 25), (3) ದೇವರ ಸರ್ಕಾರ (ಆಡಳಿತ) (ವಚನಗಳು 26-29), (4) ದೇವರ ಕೃಪೆ (ಆತನು ರಕ್ಷಕನು) (ವಚನಗಳು 30, 31).

---

ಟಿಪ್ಪಣೆಗಳು

[1]ವಾರೆನ್ ವೆರ್ಸ್ಬಿ, *The Bible Exposition Commentary,* vol. 1 (Wheaton, Ill.: Victor Books, 1989), 473. [2]ಕಡೆಯ ಪಾಠದ 17:18ರ ವಿವರಣೆ ನೋಡಿರಿ. [3]ಪೌಲನನ್ನು ನ್ಯಾಯ ವಿಚಾರಣೆಗೆ ಕರೆದೊಯ್ದಿದ್ದರೆ, ಅವನ ಕುರಿತ ನಿರ್ಣಯವು ಅಲ್ಲಿ ನಿಷಿದ್ಧವಾಗಿತ್ತು. [4]KJV ಯಲ್ಲಿ ಅವರು

"ಬಹಳ ಮೂಡನಂಬಿಕೆಯನ್ನು ಹೊಂದಿದ್ದರು," ಅದು ಅವರ ವಿಗ್ರಹದ ಕುರಿತ ವೈಯಕ್ತಿಕ ವಿಚಾರವಾಗಿತ್ತು. [5]ಪೌಸಾನಿಯಾಸ್ ಹಾಗೂ ಫಿಲಾಸ್ ಟ್ರಾಸ್ ಎಂಬ ಇಬ್ಬರೂ ಲೌಕಿಕ ಬರಹಗಾರರು. [6]ಆ ಪ್ಲೇಗಿನ ಕುರಿತು ಇಬ್ಬರು ಗ್ರೀಕ್ ಬರಹಗಾರರು ತಿಳಿಸಿರುವರು. [7]ವಚನ 30ರಲ್ಲಿ ಪದವನ್ನು ಬಳಸಲಾಗಿದೆ. [8]ತಿಳಿಯದವರಿಗೆ "ಅಗ್ನೊಸ್ಟಿಸ್" ಎನ್ನುವರು, ನಾಸ್ತಿಕನು ದೇವರೆಲ್ಲಿ ಎನ್ನುವನು. [9]14:15-17ರ ಪಾಠದ ಟಿಪ್ಪಣಿ ನೋಡಿರಿ. [10]ಸೋಲೋಮೋನನ (1 ಅರಸು 8:27) ಹಾಗೂ ಸ್ತೆಫನನ (ಅಪೊಸ್ತಲ ಕೃತ್ಯಗಳು 7:48, 49) ಮಾತುಗಳ ನೆನಪು.

[11]NASB ಯಲ್ಲಿ "ಒಂದು" ಎಂದಿರುವುದಾದರೆ KJV ಯಲ್ಲಿ "ಒಂದೇ ರಕ್ತ" ಎಂಬುದಾಗಿದೆ, ಅದನ್ನು ವೈದ್ಯಕೀಯ ಶಾಸ್ತ್ರವು ಒಪ್ಪಿಕೊಳ್ಳುತ್ತದೆ, ರಕ್ತದ ನಿಮಿತ್ತ ಮೂಲವು ಬೇರೆಯಾಗಿರುವದಿಲ್ಲ. [12]ಆದಿಕಾಂಡ 3:20. [13]ಆಗಸ್ಟ್ 30, 1995 ಅನಿಯ ಜನನ. [14]17:26 ಜನಾಂಗಿಯ ವಿಭಾಗ ಎಂದು ಕೆಲವರು ಹೇಳುವರು, "ದೇವರು ಒಬ್ಬೊಬ್ಬರನ್ನು ವಿವಿಧ ಸ್ಥಾನದಲ್ಲಿ ಇರಬೇಕೆಂದು ಪ್ರತಿಪಾದಿಸುವರು, ಏಷ್ಯದಲ್ಲಿ ಜನಿಸಿದ ಒಬ್ಬ ಯೆಹೂದಿಯು ಈ ವ್ಯಾಖ್ಯಾನ ಮಾಡಿರುವನು. ಅವನು ಯೆರುಸಲೇಮಿ ನಲ್ಲಿ ವ್ಯಾಸಂಗ ಮಾಡಿದ್ದನು, ಅವನು ಯರೋಪ್‌ನಲ್ಲಿ ಪ್ರಸಂಗಿಸುತ್ತಿದ್ದನು. ಅವನು ಸಾಮಾಜಿಕ ಹಾಗೂ ಇತರೆ ಜನರ ಸಂಪರ್ಕಹೊಂದಿದ್ದನು. ಅದರೆ ಅವನು ಭೌಗೋಳಿಕವಾಗಿ ನಿಗದಿ ಮಾಡಿರುವ ಸ್ಥಳದಲ್ಲಿ ವಾಸಿ ಸುತ್ತಿರಲಿಲ್ಲ. [15]ಒಬ್ಬನು ಇರುವಂಥ ಸ್ಥಳದಲ್ಲಿಯೇ, ದೇವರ ಯೇಜನೆಯನ್ನು ತಿಳಿಸಬಹುದು. [16]ಇಬ್ರಿಯ 11:6 ಮತ್ತು ಮತ್ತಾಯ 7:7, 8, ಧರ್ಮೋಪದೇಶಕಾಂಡ 4:29. [17]ಮೂಲವಾಕ್ಯದಲ್ಲಿ ವಚನಗಳು 27 "ಹುಡುಕು" ಎಂದು ಆರಂಭವಾಗುತ್ತದೆ. [18]NIVಯಲ್ಲಿ "ಮನುಷ್ಯರು ಹುಡುಕಲಿ ಎಂದು ದೇವರು ಇದನ್ನು ಮಾಡಿದನು" ಎಂಬುದಾಗಿದೆ. [19]"ದೇವರನ್ನು ಹುಡುಕುವದು" ಮಾನವನ ಮೂಲವಾಗಿದೆ ಮತ್ತಾಯ 5:16. [20]ಬಾಲವಿಲ್ಲದ ಕತ್ತೆಯ ಚಿತ್ರವನ್ನು ಗೊಡೆಯ ಮೇಲೆ ಅಂಟಿಸಿರುವರು, ಮಕ್ಕಳು ತಮ್ಮ ಕೈಯಲ್ಲಿರುವ ಕತ್ತೆಯ ಬಾಲವನ್ನು ಕಣ್ಣನ್ನು ಕಟ್ಟಿಕೊಂಡವರಾಗಿ ಗೋಡೆಯ ಚಿತ್ರಕ್ಕೆ ಅಂಟಿಸ ಬೇಕು.

[21]"ನಾವು ಸಹ ಆತನ ಸಂತಾನದವರೇ" ಎಂಬುದನ್ನು ಸ್ತೋಯಿಕರು ಒಪ್ಪಿಕೊಳ್ಳಲಿಲ್ಲ. [22]ತೀತ 1:12 ಎಡಿಮೆಂಡಿಸನ ಕುರಿತ ಹೇಳಿಕೆ, ಅವನು ಗ್ರೀಕರ ಮೆಚ್ಚಿನ ತತ್ವಜ್ಞಾನಿಯಾಗಿದ್ದನು. [23]ಆತನು ಸಹ ಪೌಲನಂತೆ ಕಿಲಿಕ್ಯದವನು. [24]ಕ್ಲೆಂತಸ್ ಎಂಬ ಕವಿಯು ಸ್ವಲ್ಪ ವ್ಯತ್ಯಾಸದ ಮಾತನ್ನು ಹೇಳಿರುವನು. [25]"ಥೆಯೋನ್" ಎಂಬುದನ್ನು KJV ಯಲ್ಲಿ "ದೇವರು" ಎಂದು ಹೇಳಲಾಗಿದೆ. ದೇವರ ವ್ಯತ್ಯಾಸವುಳ್ಳ ಸ್ವಭಾವ, ಇಂಗ್ಲಿಷ್‌ನಲ್ಲಿ ದೇವರು ಎಂಬುದು "ದೈವತ್ವ" "ಮನುಷ್ಯತ್ವ" ಎಂಬಂತೆ, "ದೈವತ್ವ" ಎಂಬದು ದೇವರ ಸದ್ಗುಣವಾಗಿದೆ, ಅದನ್ನು KJVಯಲ್ಲಿ "ದೈವೀಕ ಸ್ವಭಾವ" ಎನ್ನಲಾಗಿದೆ. [26]19:23-28, ವಿಗ್ರಹ ಕುರಿತ ಪೌಲನ ಬೋಧನೆಯನ್ನು ಗಮನಿಸಿರಿ. [27]KJV ಯಲ್ಲಿ "ನೋಡು" ಎಂಬುದಕ್ಕೆ "ಮಿಟುಕಿಸು" ಎಂಬುದಾಗಿದೆ. [28]ಮತ್ತೆ ಬರುವ ಮುಕ್ತಾಯ ನೋಡಿ ರೋಮಾಪುರ 1:20. [29]*ಅಪೊಸ್ತಲರ ಕೃತ್ಯಗಳು, 1ನೇ ಪುಸ್ತಕದಲ್ಲಿ* "ಮಾನಸಂತರ" ಎಂಬುದನ್ನು ನೋಡಿರಿ. [30]Karl Menninger, *Whatever Became of Sin?* (New York: Hawthorn Books, Inc., 1973), 195-96.

[31]ಆ ದಿನದ ಕುರಿತು ದೇವರು ಮಾತ್ರ ಅರಿತಿರುವನು (ಮತ್ತಾಯ 24:36). [32]William Barclay, *The Acts of the Apostles,* rev. ed. (Philadelphia: Westminster Press, 1976), 132. [33]ರೋಮಾಪುರ 1:4; 1 ಕೊರಿಂಥ 15:20 ಮುಂತಾದವು. [34]"ಈ ಮನುಷ್ಯನು ದೇವರಿಂದ ನೇ ಮಕಗೊಂಡವನೇ? ಆತನು ಮರಣದಿಂದ ಎದ್ದು ಬರುವ ಸನ್ನಿವೇಶ ಹೇಗಿತ್ತು?" (F. F. Bruce, *The Book of Acts,* rev. ed. [Grand Rapids, Mich.: Wm. B. Eerdmans Publishing Co., 1988], 342). [35]ಅರಿಯೊಪಾಗದವರು ದೇವರನ್ನು ತೀರ್ಪುಮಾಡಿದ್ದರ ನಿಮಿತ್ತ ಪೌಲನು, ದೇವರ ಕುರಿತು ನ್ಯಾಯಧಿಪತಿ ಎಂದು ಹೇಳಿದ್ದನೇ? ಅವರು ಸ್ವಾರ್ಥರಾಗಿದ್ದರಿಂದ ಪೌಲನು ಮಾನಸಾಂತರದ ಕುರಿತು ತಿಳಿಸಿದನು. [36]"ಯಥಾರ್ಥ ಹೃದಯಗಳ" ಕುರಿತ ಪಾಠವನ್ನು ನೋಡಿರಿ. [37]KJV ಯಲ್ಲಿ "ಅಪಹಾಸ್ಯ" ಅಥವಾ "ಹಿಯಾಳಿಸಿ" ಮಾತನಾಡುವವರು. [38]Wiersbe, 474. [39]This statement is preserved in Aeschylus' *Eumenides*, quoted by Richard Oster in *The Acts of the Apostles, Part II* (Austin, Tex.: Sweet Publishing Co., 1979), 77. [40]ಈ ಪಾಠದಲ್ಲಿರುವ 17:18ರ ಟಿಪ್ಪಣಿ ನೋಡಿರಿ "ದೇವರ ಸೇವೆಯಲ್ಲಿ ಯಶಸ್ಸನ್ನು ಸಾಧಿಸಲು ಸಾಧ್ಯವೆ ... (17:16-34)" ಹಿಂದಿನ ಪುಸ್ತಕದಲ್ಲಿಯೂ ಕಾಣುತ್ತೇವೆ.

[41]ವಚನ 33ರಲ್ಲಿ ಪೌಲನ ಸ್ವಾತಂತ್ರ್ಯವನ್ನು ತಿಳಿಸಲಾಗಿದೆ, ಒಂದು ವೇಳೆ ನ್ಯಾಯ ವಿಚಾರಣೆ ಅವನಿಗೆ ಅತ್ಯವಿರಲಿಲ್ಲ. [42]1 ಕೊರಿಂಥ 2:1-3 ಪೌಲನು ಅಥೇನೆಯ ಕುರಿತು ಬೇಸರ ಪಟ್ಟನು ಎಂಬ ಸೂಚನೆ ನೀಡುತ್ತದೆ. [43]ಸಂಪ್ರದಾಯದ ಪ್ರಕಾರ ದಿಯೊನುಸ್ಯನೂ ಅಥೇನೆ ಸಭೆಯ

ಸಭಾಧ್ಯಕ್ಷನಾಗಿರಬಹುದು, ಈ ದಿನ ಅವನ ಹಸರನ್ನು ಒಂದು ಬೀದಿಗೆ ಇಡಲಾಗಿದೆ. [44]ಆದಿ ಸಭೆಯ ಸ್ತ್ರೀ ಪಾತ್ರವನ್ನು ಕುರಿತು ಲೂಕನು ತಿಳಿಸಿರುವನು. [45]ದಾಮರಿಯೆಂಬಾಕೆಯ ಕುರಿತು ಅವಳು ಕಲೀನ ಸ್ತ್ರೀ ಇರಬಹುದೆಂಬ ಶಂಕೆಯಿದೆ, ಆದರೆ ಅವಳೂ ಸಹ ಮಾರ್ಸ್ ಪರ್ವತ ಪ್ರಸಂಗವನ್ನು ಆಲಿಸಿದ್ದಳು. ಆದರೆ ಲೂಕನು ಆದನ್ನು ತಿಳಿಸಲಿಲ್ಲ. ಬಹುಶಃ ಸಭಾಮಂದಿರದಲ್ಲಿ ವಾಕ್ಯವನ್ನು ಕೇಳಿದ ಮಹಿಳೆಯಿರಬಹುದು. [46]ತಿಮೊಥೆ ಹಾಗೂ ಸೀಲರು ಪೌಲನನ್ನು ಅಥೇನೆಯಲ್ಲಿ ಸೇರಿಕೊಂಡರು ಎಂಬ ವಿಷಯ ಅರಿತಿರುವದಿಲ್ಲ. [47]"ಅಖಾಯದಲ್ಲಿ ಪ್ರತಿಫಲ" ಉಂಟಾಯಿತು ಎಂಬ ವ್ಯಾಖ್ಯಾನ, ದೃಢೀಕರಿಸಬಹುದು. [48]*ಅಪೊಸ್ತಲರ ಕೃತ್ಯಗಳು, 1ನೇ* ಪುಸ್ತಕದದಲ್ಲಿ 2:47ರ ಟಿಪ್ಪಣಿ ನೋಡಿರಿ. [49]ಕೆಲವರು [at least 2] ಅಂದರೆ ದಿಯೊನುಸ್ಯನೂ [+1] ದಾಮರಿಯೆಂಬಾಕೆಯೂ [+1] - ಇತರರು ಅಂದರೆ [+ at least 2 more].